## 67

# ಕ್ರಿಸ್ತನನ್ನು ಕ್ರೂಜೆಗೆ ಹಾಕಿದ್ದು

## (27:32-56)

ಲೋಕದಲ್ಲಿ ತನ್ನ ಉದ್ದೇಶವನ್ನು ನೆರಲೇರಿಸುವ ಸಮಯ ಯೇಸುವಿಗೆ ಬಂದಿದೆ, ಮಾನವ ಕುಲದ ಪಾಪಕ್ಕಾಗಿ ಆತನು ಯಜ್ಞವಾಗಿ ಅರ್ಪಿತವಾಗಬೇಕಾಗಿದೆ (ನೋಡಿರಿ 20:28). ಅನೇಕರು ಕ್ಷಮಿಸಲ್ಪಡುವಂತೆ ಆತನು ತನ್ನ ರಕ್ತವನ್ನು ಸುರಿಸುವ ಸ್ಥಳಕ್ಕೆ ಸೈನಿಕರು ಆತನನ್ನು ನಡೆಸುತ್ತಿದ್ದಾರೆ.

ಅವರು ಗೊಲ್ಗತಾ ತಲುಪಿದಾಗ ಸೈನಿಕರು ಯೇಸುವನ್ನು ಕ್ರೂಜಿಗೆ ಮೊಳೆಗಳಿಂದ ಜಡಿದರು. "ಯೆಹೂದ್ಯರ ಅರಸನೆಂದು" ಹೇಳಿಕೊಳ್ಳುತ್ತಾನೆ ಎಂದು ಆತನ ಮೇಲೆ ದೂರಿದರು. ಹಾದುಹೋಗುವವರು, ಯೆಹೂದ್ಯ ನಾಯಕರು ಮತ್ತು ಆತನ ಪಕ್ಕದಲ್ಲಿ ನೇತು ಹಾಕಲ್ಪಟ್ಟ ಇಬ್ಬರು ಕಳ್ಳರಿಂದ ಸಹ ಬಾಧೆಗೆ ಒಳಗಾದನು. ಅಂತಿಮವಾಗಿ ಯೇಸು ತನ್ನ ಆತ್ಮವನ್ನು ಒಪ್ಪಿಸಿಕೊಟ್ಟನು.

ಯೇಸು ಕ್ರೂಜೆಯ ಮೇಲಿದ್ದಾಗ ಮತ್ತು ಆತನ ಮರಣದ ಸಮಯದಲ್ಲಿ ಹಲವು ಅಲೌಕಿಕ ಕಾರ್ಯಗಳು ಸಂಭವಿಸಿದವು: ಮೂರು ಗಂಟೆಗಳ ಕಾಲ ಕತ್ತಲು, ಭೂಕಂಪ, ಪರಿಶುದ್ಧ ಜನರ ಪುರುತ್ಥಾನ, ಮತ್ತು ದೇವಾಲಯದ ಪರದೆ ಹರಿಯಿತು.

### ಶಿಲುಬೆ ಪ್ರಯಾಣ (27:32)

**[32]ಹೊರಕ್ಕೆ ಹೋಗುತ್ತಿರುವಾಗ ಕುರೇನೆಪಟ್ಟಣದ ಸಿಮೋನನೆಂಬುವನನ್ನು ಕಂಡು ಅವನನ್ನು ಆತನ ಶಿಲುಬೆಯನ್ನು ಹೊರುವದಕ್ಕೆ ಬಿಟ್ಟೀಹಿಡಿದರು.**

**ವಚನ 32.** ಯೇಸು "ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡು ಹೋದನು" (ಯೋಹಾನ 19:17). "ಶಿಲುಬೆ" (*stauros*) ಎಂಬ ಪದ ಕೇವಲ ಅಡ್ಡವಾಗಿರುವ ಕ್ರೂಜೆಯ ಕಂಬವನ್ನು (*patibulum*) ಸೂಚಿಸುತ್ತದೆ ನೇರವಾದ ಕಂಬವನ್ನು (*stipes*) ಅನೇಕಾವರ್ತಿ ಚಿತ್ರಸಿದಂತೆ ಒಳಗೊಂಡಿರುವದಿಲ್ಲ.[1] ಸಂಪೂರ್ಣ ಶಿಲುಬೆ ಯೇಸುವಿನಂತೆ ಬಲಹೀನ ಪರಿಸ್ಥಿತಿಯಲ್ಲಿ ಇರುವ ವ್ಯಕ್ತಿಗೆ ಹೊತ್ತುಕೊಂಡು ಹೋಗಲು ಬಹಳ ಭಾರವಾಗಿರಬಹುದು.

ಅಪರಾಧಿಯು ಕ್ರೂಜೆಯ ಕಂಬದ ಒಂದು ಭಾಗವನ್ನು ಹೊತ್ತುಕೊಂಡು ಹೋಗುವದು ಸಂಪ್ರದಾಯ ಗ್ರೀಕ್ ಇತಿಹಾಸ ತಜ್ಞ Plutarch ಹೀಗೆ ಹೇಳುತ್ತಾರೆ. "ಮರಣ ದಂಡನೆಗೆ ಹೋಗುವ ಪ್ರತಿಯೊಬ್ಬ ಕೈದಿ ತನ್ನ ಕ್ರೂಜೆಯನ್ನು ತನ್ನ ಬೆನ್ನು ಮೇಲೆ ತಾನೇ ಹೊತ್ತುಕೊಂಡು ಹೋಗಬೇಕು."[2]

ಸಹಜವಾಗಿ, ಯೇಸು ಮತ್ತು ಸೈನಿಕರು ಯೆರೂಸಲೇಮಿನಿಂದ **ಹೊರಗೆ ಬರುತ್ತಿದ್ದಾರೆ** ಆತನಿಗೆ ಕ್ರೂಜೆಯ ಕಂಬದ ಭಾರವನ್ನು ಹೊತ್ತುಕೊಳ್ಳಲು ಆಗುತ್ತಿಲ್ಲ. ಆತನು ರಾತ್ರಿಯೆಲ್ಲಾ ಎಚ್ಚರವಿದ್ದಾನೆ ಬಹುಶಃ ತಿನ್ನುವದಕ್ಕೆ ಮತ್ತು ಕುಡಿಯುವದಕ್ಕೆ ಆತನಿಗೆ ಏನನ್ನೂ ನೀಡಿಲ್ಲ. ಅವನು ಸಹಿಸಿಕೊಂಡ ಗಂಭೀರವಾದ ಏಟುಗಳಿಂದಾಗಿ ಆತನು ಗಣನೀಯ ಪ್ರಮಾಣದ ರಕ್ತವನ್ನು ಕಳೆದುಕೊಂಡಿದ್ದಾನೆ. ಯಾವುದೇ ಸುವಾರ್ತಾ ಬರಹಗಾರರು ಯೇಸು ತನ್ನ ಭಾರದ ಅಡಿಯಲ್ಲಿ ಬಿದ್ದನೆಂದು ಬರೆದಿಲ್ಲವಾದರೂ, ಇಂಥಹಾ, ಬಲಹೀನ ಸ್ಥಿತಿಯಲ್ಲಿರುವ

ಒಬ್ಬ ಮನುಷ್ಯ ಕ್ರೂಜೆಯ ಕಂಬವನ್ನು ಬೋರಲು ಬೀಳದಂತೆ ಎತ್ತಿಕೊಂಡು ಹೋಗುವದು ಸಾಧ್ಯವಿಲ್ಲ ಎಂದು ಯೋಚಿಸುವದು ಸಮಂಜಸವಾಗಿದೆ.

ಇದಕ್ಕೆ ಪ್ರತಿಯಾಗಿ, ಸೈನಿಕರು . . . **ಸೀಮೋನನೆಂಬುವನನ್ನು ಕಂಡು ಅವನನ್ನು ಆತನ ಶಿಲುಬೆಯನ್ನು ಹೊರುವದಕ್ಕೆ ಬಿಟ್ಟೀಹಿಡಿದರು.** ಕ್ರೂಜೆಯನ್ನು ಹೊತ್ತುಕೊಂಡು ಹೋಗುವಂತೆ ಒತ್ತಾಯಪಡಿಸಿದರು. ರೋಮನ್ ಸೈನಿಕರು ಅವರ ಭಾರವನ್ನು ಒಂದು ಮೈಲು ದೂರ ಹೊತ್ತುಕೊಂಡು ಹೋಗಲು ಒತ್ತಾಯಪಡಿಸುವ ಅಧಿಕಾರವಿತ್ತು. ಈ ಅಭ್ಯಾಸದ ಹಿಂದೆ ಯೇಸುವಿನ ಹೇಳಿಕೆ ಇದೆ, "ಒಬ್ಬನು ನಿನಗೆ ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟಿ ಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು" (ನೋಡಿರಿ ವ್ಯಾಖ್ಯಾನ 5:41).

ಸಿಮೋನನು **ಕುರೇನ** ಪಟ್ಟಣದವನಾಗಿದ್ದನು, ಈ ಪಟ್ಟಣವು ಐಗುಪ್ತ ದೇಶದ ಪಶ್ಚಿಮಕ್ಕಿರುವ ಉತ್ತರ ಆಫ್ರಿಕದಲ್ಲಿದೆ. ದೊಡ್ಡ ಪ್ರಮಾಣದ ಯೆಹೂದ್ಯ ಜನಸಂಖ್ಯೆ ಕುರೇನ ಪಟ್ಟಣದಲ್ಲಿ ಹಳೆ ಮತ್ತು ಹೊಸ ಒಡಂಬಡಿಕೆಯ ಮಧ್ಯದ ಅವಧಿಯಲ್ಲಿ ವಾಸವಾಗಿತ್ತು.[3] ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ಸಭೆ ಸ್ಥಾಪಿತವಾದ ಪಂಚಾಶತ್ತಮ ದಿನದಂದು ಕುರೇನ ಮತ್ತು ಇತರ ಸ್ಥಳಗಳಲ್ಲಿರುವ ಯೆಹೂದ್ಯರು ಯೆರೂಸಲೇಮಿಗೆ ಬೇಟಿಕೊಡುತ್ತಿದ್ದರು ಎಂಬುದನ್ನು ನಾವು ಓದುತ್ತೇವೆ (ಅಪೊಸ್ತಲರ ಕೃತ್ಯಗಳು 2:10). ಅಪೊಸ್ತಲರ ಕೃತ್ಯ ಕುರೇನ ಮತ್ತು ಇತರ ಪಟ್ಟಣದಲ್ಲಿದ್ದ ಯೆಹೂದ್ಯರು ಯೆರೂಸಲೇಮಿಗೆ ಬಂದು ನೆಲಸಿ ಒಂದು ದೇವಾಲಯವನ್ನು ಕಟ್ಟಿಕೊಂಡಿದ್ದರು ಎಂದು ಸಹ ಹೇಳತ್ತದೆ (ಅಪೊಸ್ತಲರ ಕೃತ್ಯಗಳು 6:9). ಸೀಮೋನನು ಯೆರೂಸಲೇಮಿಗೆ ಪಸ್ಕ ಹಬ್ಬವನ್ನು ಆಚರಿಸಲು ಬಂದ ಒಬ್ಬ ಯಾತ್ರಿಕನಾಗಿರಬಹುದು ಅಥವಾ ಅವನು ತನ್ನ ಕುಟುಂಬದೊಂದಿಗೆ ಪಟ್ಟಣದಲ್ಲಿ ನೆಲೆಯಾಗಿರಬಹುದು. ಮಾರ್ಕನು "ಆ ಮಾರ್ಗವಾಗಿ ಹಾದು ಹೋಗುತ್ತಿರುವ" ಎಂದು ಸೂಚಿಸುತ್ತಾನೆ ಅವನು ಅಲೆಕ್ಸಾಂದ್ರ ರೂಫ ಅವರ ತಂದೆಯಾಗಿದ್ದನು (ಮಾರ್ಕ 15:21; ನೋಡಿರಿ ಲೂಕ 23:26). ತನ್ನ ಓದುಗರು ಅವನನ್ನು ಗುರುತಿಸದೇ ಹೋದಲ್ಲಿ ಅವನು ಯಾಕೆ ಈತನನ್ನು ಉಲ್ಲೇಖಿಸುತ್ತಾನೆ? ಪೌಲನು ರೂಫ ಎಂಬವನ ಕುರಿತಾಗಿ ರೋಮಾಪುರ 16:13ರಲ್ಲಿ ಮಾತನಾಡಿದ್ದಾನೆ, ಮಾರ್ಕನು ಹೆಸರಿಸಿದ ಅದೇ ಮನುಷ್ಯನು ಈತನಾಗಿರುವ ಸಾಧ್ಯತೆ ಇದೆ.

## ಸ್ಥಳ (27:33, 34)

**33ಮತ್ತು ಗೊಲ್ಗೊಥಾ ಅಂದರೆ ಕಪಾಲಸ್ಥಳ ಎಂಬ ಸ್ಥಾನಕ್ಕೆ ಬಂದಾಗ 34ಆತನಿಗೆ ಕಹಿ ಬೆರಸಿದ ದ್ರಾಕ್ಷಾರಸವನ್ನು ಕುಡಿಯುವದಕ್ಕೆ ಕೊಟ್ಟರು; ಆತನು ಅದನ್ನು ರುಚಿನೋಡಿ ಕುಡಿಯಲೊಲ್ಲದೆ ಇದ್ದನು.**

**ವಚನ 33.** ಮರಣ ದಂಡನೆಯನ್ನು ನೀಡಿದ್ದ ಸ್ಥಳ **ಗೊಲ್ಗೊಥಾ** ಇದು **ಕಪಾಲಸ್ಥಳ** ಅಥವಾ "ತಲೆ ಬುರುಡೆ" ಎಂಬುದಕ್ಕೆ ಅರೆಮಿಕ್ ಹೆಸರಾಗಿದೆ (ಲೂಕ 23:33). ಅಶುಭವನ್ನು ಸೂಚಿಸುವ ಕಪ್ಪು ಪದ ಲ್ಯಾಟೀನ್ *Calvaria* ("ಕಲ್ವಾರಿ") ಎಂಬ ಪದದೊಂದಿಗೆ ಸಂಬಂಧವನ್ನು ಹೊಂದಿದೆ.

ಯೇಸುವಿನ ಮರಣದ ನಿರ್ದಿಷ್ಟವಾದ ಸ್ಥಾನ ಎಂದಿಗೂ ಗೊತ್ತಾಗುತ್ತಿರಲಿಲ್ಲ. ವಾಕ್ಯಭಾಗವು ಆ ಸ್ಥಳವು ಪಟ್ಟಣದ ಗೋಡೆಯ ಹೊರಗಿತ್ತು ಎಂದು ಸೂಚಿಸುತ್ತದೆ (ಇಬ್ರಿಯ 13:12). ಇದು ಯೆಹೂದಿ ಧರ್ಮಶಾಸ್ತ್ರವನ್ನು ಅನುಸರಿಸುವದಕ್ಕಾಗಿ ಒಪ್ಪುವಂಥದ್ದಾಗಿದೆ (ಯಾಜಕಕಾಂಡ 24:14; ಅರಣ್ಯಕಾಂಡ 15:35; ನೋಡಿರಿ 1 ಅರಸುಗಳು 21:13; ಅಪೊಸ್ತಲರ ಕೃತ್ಯಗಳು 7:58).

ಯೆರೂಸಲೇಮಿಗೆ ಬರುವ ಆಗಂತುಕರಿಗೆ ಎರಡು ಸ್ಥಳಗಳನ್ನು ಗೋಲ್ಗಥಾ ಎಂದು

ತೋರಿಸುತ್ತಾರೆ. ಕ್ಯಾಥೋಲಿಕ್ ಧರ್ಮದವರು ಗೋಲ್ಗಥಾವನ್ನು ಪರಿಶುದ್ಧ ದೇವಾಲಯದಲ್ಲಿ ಸ್ಥಾಪಿತವಾಗಿರುವ ಬಂಡೆಯೆಂದು ಗುರುತಿಸುತ್ತಾರೆ. ಈ ಕಟ್ಟಡವನ್ನು ಮೂಲತಃ ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ರೋಮನ್ ಚಕ್ರವರ್ತಿಯಾದ ಕ್ವಾನಸ್ಟಂಟೈನ್ ಕಟ್ಟಿದ್ದಾನೆ. ಈ ಸ್ಥಳವು ಕ್ರಿಸ್ತನ ಕಾಲದಲ್ಲಿ ಯೆರೂಸಲೇಮಿನ ಗೋಡೆಗಳ ಆಚೆಯಲ್ಲಿ ಸ್ಥಾಪಿತವಾಗಿರಬಹುದು. ಅಲ್ಲಿ ಸ್ಥಾಪಿತವಾಗಿರುವ ಅಸಂಖ್ಯಾತ ಸಮಾಧಿಗಳು ಒಂದನೆಯ ಶತಮಾನದಲ್ಲಿ ಕಟ್ಟಿದವುಗ ಳಾಗಿರಬಹುದು.

ಪ್ರೊಟೆಸ್ಟೆಂಟ ಸಂಪ್ರದಾಯ ಬೆಟ್ಟದ ಮೇಲಿರುವ "Gordon's Calvary" ಎಂದು ಹೆಸರಾಗಿರುವ ಸ್ಥಳವನ್ನು ಸೂಚಿಸುತ್ತದೆ ಬೆಟ್ಟದ ಬದಿಯಲ್ಲಿರುವ ಶಿಲೆಗಳ ರಚನೆ ಮಾನವನ ತಲೆಬುರುಡೆಯಂತೆ ಕಾಣುತ್ತದೆ. ಈ ಸ್ಥಳವನ್ನು 1800ರಲ್ಲಿ ಹಲವು ಪುರುಷರು ಸೂಚಿಸಿದ್ದಾರೆ, ಆದರೆ ಇದು ಜನರಲ್ ಚಾರ್ಲ್ಸ್ ಜಾರ್ಜ್ ಗೋರ್ಡಾನ್ ಎಂದು ಪ್ರಸಿದ್ಧವಾಗಿದೆ, ಜನಪ್ರಿಯ ಬ್ರಿಟಿಷ್ ಸೈನ್ಯದ ನಾಯಕ. ಹಾಗೂ, ಬೆಟ್ಟದ ನೋಟವು ನಂತರದ ಭೂಶೋಧನೆಯ ಕಾರ್ಯದಿಂದಾಗಿರಬಹುದು; ಅದು ಮೊದಲನೆಯ ಶತಮಾನದಲ್ಲಿ ಹೀಗೆ ಕಾಣುತ್ತಿರಲಿಕ್ಕಿಲ್ಲ. ಇದರೊಟ್ಟಿಗೆ, ಪುರಾತನ ವಸ್ತುಶಾಸ್ತ್ರಜ್ಞರು ಸಮೀಪದಲ್ಲಿರುವ ಸಮಾಧಿಗಳ ದಿನಾಂತರವನ್ನು ತೋಟದ ಸಮಾಧಿಯನ್ನೊಳಗೊಂಡು, ಕ್ರಿ.ಪೂ. ಎಂಟನೇ ಮತ್ತು ಏಳನೆಯ ಶತಮಾನದ್ದವೆಂದು ಗುರುತಿಸಿದ್ದಾರೆ.[4]

**ವಚನ 34.** ಗೊಲ್ಗಥಾ ತಲುಪಿದ ನಂತರ ಕ್ರೂಜೆಗೆ ಹಾಕುವದಕ್ಕೆ ಮೇಲ್ವಿಚಾರಕರಾದ ಸೈನಿಕರು ಯೇಸುವಿಗೆ **ಕಹಿ ಬೆರಸಿದ ದ್ರಾಕ್ಷಾರಸವನ್ನು ಕುಡಿಯುವದಕ್ಕೆ ಕೊಟ್ಟರು.** "ಕಹಿ" (*cholē*) ಎಂಬುದಕ್ಕೆ ಗ್ರೀಕ್ ಪದ ಕಹಿ ರುಚಿಯುಳ್ಳ ವಸ್ತುವನ್ನು ಉಲ್ಲೇಖಿಸುತ್ತದೆ (ನೋಡಿರಿ ಕೀರ್ತನೆ 69:21). ಮಾರ್ಕ 15:23 ದ್ರಾಕ್ಷಾರಸದಲ್ಲಿ "ರಕ್ತ ಬೋಳವನ್ನು" ಬೆರೆಸಿದ್ದರೆಂದು ಹೇಳುತ್ತದೆ.

ರೋಮನ್ ಸೈನಿಕರು ಈ ಸಮಯದಲ್ಲಿ ಯೇಸುವಿಗೆ ದ್ರಾಕ್ಷಾರಸವನ್ನು ಏಕೆ ನೀಡಿದರು? (1) ಅವರು ಮತ್ತೆ ಆತನನ್ನು ಹಾಸ್ಯ ಮಾಡುತ್ತಿದ್ದರೋ? ಅವನಿಗೆ ಉತ್ತೇ ಜನವನ್ನು ನೀಡುವ ಪಾನೀಯವನ್ನು ನೀಡುವದಕ್ಕೆ ಬದಲಾಗಿ ಅವನಿಗೆ ಕಹಿ ಪಾನೀಯವನ್ನು ಕೊಡಲು ಬಯಸಿದ್ದರೋ? ಬಹುಶಃ ಇಲ್ಲ. (2) ಅವರು ನೀಡಿದ ಪಾನೀಯ ಮಬ್ಬು ತರುವ ಅಂಶವನ್ನು ಹೊಂದಿತ್ತೋ, ನಿಜವಾಗಿಯೂ ಆತನ ಕಷ್ಟ ಮತ್ತು ಹಿಂಸೆಯನ್ನು ಮುಂದುವರೆಸುವಂತದ್ದಾಗಿತ್ತೋ? ಇದು ಸಹ ವಿಷಯವಾಗಿರಲಿಕ್ಕಿಲ್ಲ. (3) ಮಾನವೀ ಯತೆಯ ದೃಷ್ಟಿಯಿಂದ ಯೇಸುವಿನ ಪ್ರಜ್ಞೆಯನ್ನು ಮಂಕು ಮಾಡಿ ಆತನಿಗೆ ವೇದನೆಯನ್ನು ಸಹಿಸಲು ಸಹಾಯಮಾಡುವ ಉದ್ದೇಶವಾಗಿತ್ತೋ? ಇದನ್ನು ಯೇಸುವನ್ನು ಕ್ರೂಜೆಗೆ ಹಾಕಿ ಮೊಳೆಹೊಡೆಯುವ ಸ್ವಲ್ಪ ಸಮಯ ಪೂರ್ವದಲ್ಲಿ ನೀಡಲಾಯಿತು. ಇದು ಉತ್ತಮವಾದ ಕಾರಣವಾಗಿರಬಹುದು. ಕೊನೆಯ ಕಲ್ಪನೆ ತಲ್ಮಾಂಡ್‌ನಲ್ಲಿ ಕಾಯ್ದಿರಿಸಿದ ಸಂಪ್ರದಾಯದೊಂದಿಗೆ ಹೊಂದಿಕೆಯಾಗುತ್ತದೆ. "ಒಬ್ಬನನ್ನು ಮರಣದಂಡನೆಗೆ ತೆಗೆದುಕೊಂಡ ಹೋಗುವಾಗ, ಅವನಿಗೆ ಲೋಬಾನದ ತುಣುಕುಗಳನ್ನು ಹಾಕಿರುವ ದ್ರಾಕ್ಷಾರಸವನ್ನು ಒಂದು ಪಾತ್ರೆಯಲ್ಲಿ ಅವನ ಪ್ರಜ್ಞೆಗೆ ಮಂಕು ತರಿಸುವದಕ್ಕಾಗಿ ನೀಡುತ್ತಾರೆ ... ಯೆರೂಸಲೇಮಿನಲ್ಲಿದ್ದ ಒಬ್ಬ ಕುಲೀನ ಸ್ತ್ರೀ ಇದನ್ನು ಕಾಣಿಕೆಯಾಗಿ ನೀಡಲು ತರುತ್ತಿದ್ದಳು."[5]

ಕಹಿ ಬೆರೆಸಿದ ದ್ರಾಕ್ಷರಸವನ್ನು **ರುಚಿನೋಡಿದ ನಂತರ,** ಯೇಸು ಅದನ್ನು **ಕುಡಿಯಲೊಲ್ಲದೆ ಇದ್ದನು.** ಬಹುಶಃ ಆತನು ಅತೀ ಕಹಿ ಪಾತ್ರೆಯನ್ನು ಕುಡಿಯುವದಕ್ಕೆ ನಿರಾಕರಿಸಿದನು ಯಾಕೆಂದರೆ ಆತನು ತಾನು ಕುಡಿಯಲಿಕ್ಕಿರುವ ವೇದನೆಯ ಪಾತ್ರೆಯನ್ನು ಸಂಪೂರ್ಣವಾಗಿ ರುಚಿನೋಡಲು ಬಯಸಿದ್ದನು (ನೋಡಿರಿ ವ್ಯಾಖ್ಯಾನ 26:39).

## ಕ್ರೂಜೆಗೆ ಹಾಕುವ ವಿಧಾನ (27:35-37)

**35ಬಳಿಕ ಅವರು ಆತನನ್ನು ಶಿಲುಬೆಗೆ ಹಾಕಿ ಆತನ ಬಟ್ಟೆಗಳಿಗಾಗಿ 36ಚೀಟು ಹಾಕಿ ಪಾಲುಮಾಡಿಕೊಂಡರು; ಮತ್ತು ಅಲ್ಲಿ ಕೂತುಕೊಂಡು ಆತನನ್ನು ಕಾಯುತ್ತಾ ಇದ್ದರು. 37ಇದಲ್ಲದೆ ಆತನ ಮೇಲೆ ಹೊರಿಸಿದ ಅಪರಾಧವನ್ನು ಬರೆದು ಆತನ ತಲೆಯ ಮೇಲ್ಗಡೆ ಹಚ್ಚಿದರು; ಅದೇನಂದರೆ - ಇವನು ಯೇಸು, ಯೆಹೂದ್ಯರ ಅರಸನು ಎಂಬುದೇ.**

**ವಚನಗಳು 35, 36.** ಕ್ರೂಜೆಗೆ ಹಾಕುವ ಕಾರ್ಯ ದಿನದ ಮೂರನೆಯ ಗಳಿಗೆಯಲ್ಲಿ ಅಥವಾ ಬೆಳಗಿನ 9 ಗಂಟೆಗೆ ಪ್ರಾರಂಭವಾಯಿತು (ಮಾರ್ಕ 15:25). **ಅವರು ಆತನನ್ನು ಶಿಲುಬೆಗೆ ಹಾಕಿದರು** ಎಂಬ ವಾಕ್ಯಭಾಗ ಕ್ರೂಜೆಗೆ ಹಾಕುವ ಸಂಪೂರ್ಣ ವಿಧಾನವನ್ನು ಉಲ್ಲೇಖಿಸುವದಿಲ್ಲ ಆದರೆ ಯೇಸುವಿನ ಕೈಗಳನ್ನು ಕ್ರೂಜೆಯ ಕಂಬಕ್ಕೆ ಜಡಿದು ಅದರ ಸ್ಥಳಕ್ಕೆ ಎತ್ತಿ ಇಟ್ಟು ಆತನ ಕಾಲುಗಳನ್ನು ಲಂಬವಾಗಿರುವ ಕಂಬಕ್ಕೆ ಮೊಳೆಜಡಿಯುವವರೆಗೆ ಮಾತ್ರ ಹೊಡೆದರು.

ಕ್ರೂಜೆಯ ಮರಣವು ಪ್ರಾಚೀನ ಲೋಕವು ಯೋಜಿಸಿದ ಅತ್ಯಂತ ಭಯಂಕರವಾದ ಮರಣದಂಡನೆಯ ವಿಧಾನವಾಗಿದೆ. ಇದನ್ನು ಪಾಲಿಸ್ತೀನ ದೇಶದಲ್ಲಿ ಪರ್ಶಿಯನ್ನರು ಪರಿಚಯಿಸಿದರು ಆದರೆ ರೋಮನ್‌ರು ಇದನ್ನು ಪರಿಪೂರ್ಣಗೊಳಿಸಿದರು. ಸುವಾರ್ತೆಯು ಕ್ರೂಜೆಗೆ ಹಾಕುವದರ ನಿಜವಾದ ವರ್ಣನೆಯನ್ನು ವಿವರವಾಗಿ ನೀಡುವದಿಲ್ಲ. ಇದು ಅನಾವಶ್ಯಕವಾಗಿದೆ, ಯಾಕಂದರೆ ಕ್ರಿಸ್ತನ ಮರಣದ ಸಮಯದಲ್ಲಿ ವಾಸಿಸುವಂತವರಿಗೆ ಇಂಥಹ ಭಯಂಕರವಾದ ದೃಶ್ಯ ಚಿರಪರಿಚಿತವಾಗಿತ್ತು. ಇದರಿಂದಾಚೆಗೆ ಸುವಾರ್ತೆಯ ಬರಹಗಾರರು ಕ್ರೂಜೆಯ ಮರಣದ ದೈಹಿಕ ಅಂಶಗಳನ್ನು ಸೇರಿಸುವ ವಿಷಯದಲ್ಲಿ ಮೌನವಾಗಿದ್ದರು ತಾವು ಮಾತಿನಲ್ಲಿ ಹೇಳಲಾರದ ಆತ್ಮೀಕ ಆಯಾಮದಿಂದ ಬೇರ್ಪಡಬಾರದು ಎಂಬ ಭಯದಿಂದಾಗಿರಬಹುದು.

ಇನ್ನು ಮುಂದಿನ ಅವಮಾನದಲ್ಲಿ, ಅಪರಾಧಿ ಎಂದು ತೀರ್ಪುಹೊಂದಿದ ವ್ಯಕ್ತಿಯ ನಡುವಿಗೆ ಕಟ್ಟಿದ ಬಟ್ಟೆಯನ್ನು ಕಳಚುತ್ತಿದ್ದರು. ಯೇಸು ಪರಲೋಕ ಮತ್ತು ಭೂಲೋಕದ ಮಧ್ಯದಲ್ಲಿ ತೂಗುತ್ತಿರುವಾಗ ರೋಮನ್ ಸೈನಿಕರು **ಆತನ ಬಟ್ಟೆಗಳಿಗಾಗಿ ಚೀಟು ಹಾಕಿ ಪಾಲುಮಾಡಿಕೊಂಡರು.** ಅವರು ಆತನ ನಿಲುವಂಗಿಯನ್ನು ಭಾಗಮಾಡಿಕೊಳ್ಳಲು ಮನಸ್ಸು ಮಾಡಲಿಲ್ಲ, ಯಾಕಂದರೆ "ಅದು ಒಂದೇ ತುಂಡು ಬಟ್ಟೆಯಲ್ಲಿ ಮಾಡಿದಂತೆ ತೋರುತಿತ್ತು" (ಯೋಹಾನ 19:23, 24). ಆತನ ನಿಲುವಂಗಿಗೆ ಚೀಟುಹಾಕುವ ಅವರ ನಿರ್ಧಾರ ಪ್ರವಾದನೆಯನ್ನು ನೆರವೇರಿಸಿತು ಕೀರ್ತನೆ 22:18ರ ಪ್ರವಾದನೆ ನೆರವೇರಿದೆ: "ನನ್ನ ಮೇಲೋದಿಕೆಯನ್ನು ತಮ್ಮಲ್ಲಿ ಪಾಲು ಮಾಡಿಕೊಳ್ಳುತ್ತಾರೆ; ನನ್ನ ಅಂಗಿಕ್ಕೋಸ್ಕರ ಚೀಟು ಹಾಕುತ್ತಾರೆ." ನಂತರ ಸೈನಿಕರು ಕ್ರೂಜೆಗೆ ಹಾಕಿದ ಕಾರ್ಯವನ್ನು ಸಂಪೂರ್ಣಗೊಳಿಸಲು ಅಪರಾಧಿಯನ್ನು ಯಾರು ರಕ್ಷಿಸಬಾರದು ಎಂಬುದನ್ನು ಖಚಿತಪಡಿಸಿಕೊಳ್ಳುವದಕ್ಕೋಸ್ಕರ ಕೆಳಗೆ ಕೂತುಕೊಂಡರು. ಮೇಲ್ವಿಚಾರಕನಾದ ಶತಾಧಿಪತಿಯು ಅಪರಾಧಿಯು ನಿಜವಾಗಿ ಮರಣಹೊಂದುವವರೆಗೆ ತನ್ನ ಭದ್ರತೆಯಲ್ಲಿ ಕಾಯಬೇಕಾಗಿತ್ತು (ಮಾರ್ಕ 15:44, 45).

**ವಚನ 37.** ರೋಮನ್ನರು ವಿಧವಿಧವಾದ ಶಿಲುಬೆಗಳನ್ನು ಉಪಯೋಗಿಸುತ್ತಿದ್ದರು: ಕನಿಷ್ಟ ಮೂರು ಆಕಾರದಲ್ಲಿ T, †, ಮತ್ತು X. ಯೇಸುವಿನ ಮೇಲಿರುವ ಲಿಖಿತ ದೂರನ್ನು **ತಲೆಯ ಮೇಲೆ** ಹಾಕಿದ್ದರು ಇದು ಆತನನ್ನು ಸಂಪ್ರದಾಯಿಕವಾದ ಆಕಾರದ ಶಿಲುಬೆಯ ಮೇಲೆ ಕ್ರೂಜೆಗೆ ಹಾಕಿದ್ದರು ಎಂಬುದನ್ನು ಬೆಂಬಲಿಸುತ್ತದೆ. ಗುರುತನ್ನು ಯೇಸುವಿನ ಕುತ್ತಿಗೆಯಲ್ಲಿ ನೇತುಹಾಕಿರಬಹುದು ಇಲ್ಲವೇ ಒಬ್ಬ ಸೈನಿಕನನ್ನು ಆತನು ಯೆರೂಸಲೇಮಿನ ಮಾರ್ಗದಲ್ಲಿ ಮೆರವಣಿಗೆಯ ರೂಪದಲ್ಲಿ ಹೋಗುತ್ತಿರುವಾಗ ಅದನ್ನು ಕೈಯಲ್ಲಿ ಹಿಡಿದುಕೊಂಡು ಆತನ ಎದುರಿನಲ್ಲಿ ಹೋಗಿರಬಹುದು (ನೋಡಿರಿ ವ್ಯಾಖ್ಯಾನ 27:31). ಅಪರಾಧಿಯ

ವಿರುದ್ಧವಾಗಿರುವ ದೂರುಗಳನ್ನು ಸಾರ್ವಜನಿಕವಾಗಿಡುವ ಸಂಪ್ರದಾಯವು ಅಪರಾಧಿಗೆ ಅವಮಾನ ಮಾಡಿದಂತಾಗುತಿತ್ತು. ಇದು ನೋಡುವವರಿಗೆ ರೋಮನ್ನರ ವಿರುದ್ಧವಾಗಿ ಇದೇ ರೀತಿಯ ಅಪರಾಧವನ್ನು ಮಾಡುವದರ ಕುರಿತು ಭಯವನ್ನು ಹುಟ್ಟಿಸುತಿತ್ತು.

ಮತ್ತಾಯನ ಪ್ರಕಾರ, ಸಂಕೇತವು **ಇವನು ಯೇಸು, ಯೆಹೂದ್ಯರ ಅರಸನು** ಎಂಬುದಾಗಿತ್ತು. ನಾಲ್ಕು ಸುವಾರ್ತೆಯನ್ನು ಸೇರಿಸುವದರ ಮೂಲಕ ಸಂಪೂರ್ಣ ಬರಹವನ್ನು "ಈತನು ನಜರೇತಿನ ಯೇಸು, ಯೆಹೂದ್ಯರ ಅರಸನು" ಎಂದು ಸಂಕ್ಷಿಪ್ತಗೊಳಿಸಬಹುದು. ಯೆಹೂದ್ಯ ಅಧಿಕಾರಿಗಳು ಪಿಲಾತನಿಗೆ ಬರಹವನ್ನು "ಯೆಹೂದ್ಯರ ಅರಸನೆಂದು ಹೇಳಿ ಕೊಳ್ಳುವವನು" ಎಂದು ಬದಲಾಯಿಸಬೇಕೆಂದು ಕೇಳಿಕೊಂಡರು (ಒತ್ತಿ ಹೇಳಿರುವದು ಸೇರಿದೆ); ಆದರೆ, ಪಿಲಾತನು ಬದಲಾವಣೆಯನ್ನು ಮಾಡಲು ನಿರಾಕರಿಸಿದನು, ದೃಢವಾಗಿ ಪ್ರಕಟಿಸಿದನು, "ನಾನು ಬರೆದದ್ದು, ಬರೆದಾಯಿತು" (ಯೋಹಾನ 19:21, 22).

## ಆತನೊಂದಿಗೆ ಕ್ರೂಜೆಗೆ ಹಾಕಿದವರ ಹೆಚ್ಚಿನ ಅವಮಾನಗಳು (27:38-44)

**38ಆಗ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ
ಆತನ ಸಂಗಡ ಶಿಲುಬೆಗೆ ಹಾಕಿದರು. 39ಅಲ್ಲಿ ಹಾದುಹೋಗುವವರು ತಲೇ ಆಡಿಸಿ - ದೇವಾ
ಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ; 40ದೇವರಮಗನು
ಆಗಿದ್ದರೆ ಶಿಲುಬೆಯಿಂದ ಇಳಿದು ಬಾ ಎಂದು ಆತನನ್ನು ಹಂಗಿಸುತ್ತಿದ್ದರು. 41ಅದೇ ಮೇರೆಗೆ
ಮಹಾಯಾಜಕರೂ ಶಾಸ್ತ್ರಿಗಳೂ ಹಿರಿಯರೂ - ಅವನು ಮತ್ತೊಬ್ಬರನ್ನು ರಕ್ಷಿಸಿದನು, ತನ್ನನ್ನು
ರಕ್ಷಿಸಿಕೊಳ್ಳಲಾರನು. 42ಅವನು ಇಸ್ರಾಯೇಲಿನ ಅರಸನಲ್ಲವೇ. ಈಗ ಶಿಲುಬೆಯಿಂದ ಇಳಿದು
ಬರಲಿ, ಇಳಿದು ಬಂದರೆ ಅವನಲ್ಲಿ ನಂಬಿಕೆಯಿಟ್ಟೇವು. 43ದೇವರಲ್ಲಿ ಭರವಸವಿಟ್ಟಿದ್ದಾನೆ,
ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ; ತಾನು ದೇವರ ಮಗನಾಗಿದ್ದೇ
ನೆಂದು ಹೇಳಿದನಲ್ಲಾ ಎಂದು ಹಾಸ್ಯದಿಂದ ಮಾತಾಡುತ್ತಿದ್ದರು. 44ಆತನ ಸಂಗಡ ಶಿಲುಬೆಗೆ
ಹಾಕಲ್ಪಟ್ಟ ಕಳ್ಳರು ಸಹ ಆತನನ್ನು ಅದೇ ಪ್ರಕಾರ ನಿಂದಿಸುತ್ತಿದ್ದರು.**

**ವಚನ 38.** ಇಲ್ಲಿ ಮತ್ತಾಯನು ಮೊದಲನೆಯ ಬಾರಿಗೆ **ಇಬ್ಬರು ಕಳ್ಳರನ್ನು ಆತನ ಸಂಗಡ ಶಿಲುಬೆಗೆ ಹಾಕಿದರು.** ಲೂಕ 23:32 ಈ ಇಬ್ಬರು ಕಳ್ಳರ ಸಹ ಯೇಸುವಿನೊಂದಿಗೆ ಯೆರೂಸಲೇಮಿನ ಮಾರ್ಗದಲ್ಲಿ ಮೆರವಣಿಗೆಯಲ್ಲಿ ಭಾಗಿಗಳಾಗಿದ್ದರು ಎಂದು ಸೂಚಿಸುತ್ತದೆ. ಗೋಲ್ಗಥಾಗೆ ತಲುಪಿದ ನಂತರ ಅವರನ್ನು ಕ್ರೂಜೆಗೆ ಹಾಕಿದರು ಮತ್ತು ಅವರನ್ನು ಆತನ ಬದಿಗೆ ಇರಿಸಿದರು **ಒಬ್ಬನನ್ನು ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ.** ಈ ದೃಶ್ಯವು ಯೆಶಾಯನ ಪ್ರವಾದನೆಯನ್ನು ನೆರವೇರಿಸುತ್ತದೆ ಅದು ಹೀಗೆ ಹೇಳುತ್ತದೆ ಶ್ರಮೆಯ ಸೇವಕನು "ದ್ರೋಹಿಗಳೊಂದಿಗೆ ತನ್ನನ್ನು ಎಣಿಸಿಕೊಂಡನು" (ಯೆಶಾಯ 53:12).

ಗೋಲ್ಗೊಥಾದಲ್ಲಿರುವ ದೃಶ್ಯ ಒಂದು ಮುಖ್ಯ ಶಿಲುಬೆಯನ್ನು ತೋರಿಸುತ್ತದೆ - ಆದರೆ ಮತ್ತಾಯನು ಅಲ್ಲಿ ಇನ್ನೂ ಎರಡು ಶಿಲುಬೆಗಳಿದ್ದವು ಎಂದು ಹೇಳುತ್ತಾನೆ. ಹಲವು ವಿಧದಲ್ಲಿ ಈ ಮೂರು ಶಿಲುಬೆಗಳು ಒಂದೇ ತೆರನಾಗಿದ್ದವು. ಅವುಗಳ ಮೇಲೆ ನೇತಾಡುವ ಮೂರು ಪುರುಷರು ವೇದನೆಯನ್ನು, ಉಸಿರುಗಟ್ಟುವದನ್ನು, ಬಿಸಿಲನ್ನು ಕಣ್ಣಿನಲ್ಲಿ ಮತ್ತು ಅವರ ಗಾಯಗಳಲ್ಲಿ ಸೋರುವಿಕೆಯನ್ನು, ಅವಮಾನವನ್ನು ಮತ್ತಿ ಕ್ರಿಮಿಕೀಟಗಳನ್ನು ಅನುಭವಿಸಬೇಕಾಗಿತ್ತು. ಅವರು ಹಾದುಹೋಗುವವರು ಈ ಮೂವರು ಪುರುಷರು ಭಯಂಕರವಾದ ಅವಮಾನಕರವಾದ ಮರಣವನ್ನು ವೀಕ್ಷಿಸುವ ತೀಕ್ಷ್ಣವಾದ ದೃಷ್ಟಿಯನ್ನು ಸಹಿಸಿಕೊಳ್ಳಬೇಕಾಗಿತ್ತು. ಅಲ್ಲಿ ಅಗಾಧವಾದ ವ್ಯತ್ಯಾಸವಿತ್ತು, ಒಂದು ಕ್ರಾಂತಿಕಾರಿಯಾದ ಶಿಲುಬೆ ಪಶ್ಚಾತಾಪ ಪಡೆಯಿರುವ ಕಳ್ಳನನ್ನು ಹೊತ್ತುಕೊಂಡಿತ್ತು (ಲೂಕ 23:39). ಎರಡನೆಯದಾಗಿ, ಪಶ್ಚಾತಾಪದ ಶಿಲುಬೆ ಪಶ್ಚಾತಾಪಪಟ್ಟು ಕಳ್ಳನನ್ನು ಹೊತ್ತುಕೊಂಡಿದೆ (ಲೂಕ 23:40, 41),

ಮೂರನೆಯದು, ವಿಮೋಚನೆಯ ಶಿಲುಬೆ, ಅದರ ಮೇಲೆ ಯೇಸು ಕ್ರಿಸ್ತನು ಸತ್ತನು.

ಯೇಸುವಿನೊಂದಿಗೆ ಸಾಯುತ್ತಿದ್ದ ಕಳ್ಳರು ಚಿಕ್ಕ ಕಳ್ಳರಲ್ಲ "ದರೋಡೆಕೋರರು" (*lēistai*) ಎಂಬ ಪದಕ್ಕೆ ಗ್ರೀಕ್ ಪದ ತಮ್ಮ ಕಾರ್ಯವನ್ನು ನೆರವೇರಿಸಲು ಬಲಪ್ರಯೋಗ ಮಾಡುವ ಮತ್ತು ಅಹಿಂಸೆಯನ್ನು ಉಪಯೋಗಿಸುವದಕ್ಕೆ ಹಿಂಜರಿಯದವರು ಎಂದರ್ಥ. ಬಹುಶಃ ಕೆಲವೊಮ್ಮೆ ಈ ಪದವು ಕ್ರಾಂತಿಕಾರಿಗಳನ್ನು ಉಲ್ಲೇಖಿಸಲು ಸಹ ಉಪಯೋಗಿ ಸಲಾಗುತ್ತದೆ. ಬರಬ್ಬನನ್ನು (*lēistēs*; ಯೋಹಾನ 18:40) ಕರೆದರು; ಅವನು ದಂಗೆ ಎಬ್ಬಿಸಿದ್ದಕ್ಕಾಗಿ ಮತ್ತು ಕೊಲೆ ಮಾಡಿದಕ್ಕಾಗಿ ಅವನು ಸೆರೆಮನೆಯಲ್ಲಿದ್ದನು (ಮಾರ್ಕ 15:7). ಯೇಸುವಿನ ಪಕ್ಕದಲ್ಲಿ ಕ್ರೂಜೆಗೆ ಹಾಕಿದ್ದ ಇಬ್ಬರು ಮನುಷ್ಯರು ಬರಬ್ಬನ ನಾಯಕತ್ವದಲ್ಲಿದ್ದ ತಂಡದ ಸದಸ್ಯರಾಗಿದ್ದರು, ಅವರು ಸಹ ಅವನನ್ನು ಬಂದಿಸಿದಾಗಲೇ ಬಂಧಿಸಲ್ಪಟ್ಟಿದ್ದರು (ನೋಡಿರಿ ವ್ಯಾಖ್ಯಾನ 26:55).

ಇಬ್ಬರು ಕಳ್ಳರ ಹೆಸರುಗಳನ್ನು ಹೊಸ ಒಡಂಬಡಿಕೆಯಲ್ಲಿ ಪ್ರಕಟಿಸಿರುವದಿಲ್ಲ. ಶತಮಾನಗಳಿಂದ, ಈ ಜೋಡಿಗೆ ನಿಜವಲ್ಲದಿದ್ದರೂ ಹಲವು ಬೇರೆ ಬೇರೆ ಹೆಸರುಗಳನ್ನು ಇಡಲಾಗಿದೆ. ಅವು ಈ ಹೆಸರುಗಳನ್ನು Dismas ಮತ್ತು Gestas, Zoatham ಮತ್ತು Camma, Joathas ಮತ್ತು Maggatras ಮತ್ತು Titus ಮತ್ತು Dumachus ಒಳಗೊಂಡಿವೆ.[6]

**ವಚನ 39. ಹಾದುಹೋಗುವವರು** ಯೇಸುವನ್ನು ದೂಷಿಸಿದವರಲ್ಲಿ ಮೊದಲನೆಯ ಗುಂಪಿನ ಜನರಾಗಿದ್ದರು. ಕ್ರೂಜೆಗೆ ಹಾಕಿದ ಸ್ಥಳವು ಪಟ್ಟಣದ ಹೊರಗೆ ಇದ್ದದರಿಂದ, ಅನೇಕ ಯೆಹೂದ್ಯರು ಯೇಸುವನ್ನು ಕ್ರೂಜೆಗೆ ಹಾಕಿರುವದನ್ನು ವೀಕ್ಷಿಸಿದ್ದರು (ಯೋಹಾನ 19:20). ಅಲ್ಲಿ ಹಾದು ಹೋದವರಲ್ಲಿ ಬಹುಶಃ ಕೆಲವರು ಯೆರೂಸಲೇಮಿಗೆ ಪಸ್ಕ ಹಬ್ಬಕ್ಕೆ ಬಂದಿದ್ದ ಯಾತ್ರಿಕರಾಗಿದ್ದರು.

ಹಾದುಹೋಗುವವರು ಯೇಸುವನ್ನು ನೋಡಿ **ತಲೆ ಆಡಿಸಿದರು** ಅವರು ಯೇಸುವಿಗೆ ಮಾಡುತ್ತಿದ್ದ ಈ ಕುಚೋದ್ಯ ಕೀರ್ತನೆ 22:6, 7ರಲ್ಲಿ ಬರೆದಿರುವ ಪ್ರವಾದನೆಯನ್ನು ನೆರವೇರಿಸಿತು:

> ನಾನಾದರೋ ಹುಳದಂಥವನೇ ಹೊರತು ಮನುಷ್ಯನಲ್ಲ; ಮನುಷ್ಯರಿಂದ ನಿಂದಿಸಲ್ಪಟ್ಟು ಜನರಿಂದ ತಿರಸ್ಕಾರ ಹೊಂದಿದ್ದೇನೆ. ನನ್ನನ್ನು ನೋಡುವವರೆಲ್ಲರೂ ಹಾಸ್ಯಮಾಡುತ್ತಾರೆ; ಅವರು ಓರೇ ತುಟಿಮಾಡಿ ತಲೆ ಆಡಿಸುತ್ತಾರೆ.

**ವಚನ 40. ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ; ದೇವರ ಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ** ಎಂದು ಈ ಜನರು ಆತನನ್ನು ಹಂಗಿಸುತ್ತಿದ್ದರು. ಅವರ ಭಾಷೆ ಹಿಂದಿನ ಘಟನೆಯೆಡೆಗೆ ಬೆರಳನ್ನು ತೋರಿಸುತ್ತದೆ. ಮೊದಲನೆಯದಾಗಿ, ಅವರು ಯೇಸುವಿನ ಹೇಳಿಕೆಯನ್ನು ಜ್ಞಾಪಿಸಿಕೊಂಡರು. ದೇವಾಲಯದ ಮೊದಲನೆಯ ಶುದ್ಧೀಕರಣದಲ್ಲಿ ಆತನು ಹೇಳಿದ್ದು, "ಈ ದೇವಾಲಯವನ್ನು ಕೆಡವಿರಿ; ನಾನು ಅದನ್ನು ಮೂರು ದಿನದಲ್ಲಿ ಎಬ್ಬಿಸುತ್ತೇನೆ" (ಯೋಹಾನ 2:19). ಯೆಹೂದ್ಯರು ಮೂರು ವರ್ಷಗಳಿಂದ ಅವರ ಮನಸ್ಸಿನಲ್ಲಿ ಆತನ ಹೇಳಿಕೆಯನ್ನು ತಿರುಚಿ ಇಟ್ಟುಬಿಟ್ಟಿದ್ದರು ಅವರು ಆತನ ಅದ್ಭುತ ಕಾರ್ಯಗಳನ್ನು ಹಾಸ್ಯಮಾಡುತ್ತಿದ್ದರು. ಯೆಹೂದ್ಯರ ವಿಚಾರಣೆಯ ಸಂದರ್ಭದಲ್ಲಿ ಸುಳ್ಳು ಸಾಕ್ಷಿಗಳು ಆತನ ಹೇಳಿಕೆಯನ್ನು ಗಲಿಬಿಲಿಗೊಂಡಿರುವ ದೃಷ್ಟಿಕೋನ ದಲ್ಲಿ ಉಲ್ಲೇಖಿಸಿದ್ದರು (ನೋಡಿರಿ ವ್ಯಾಖ್ಯಾನಗಳು 26:60, 61). ಸಹಜವಾಗಿ, ಯೆಹೂದ್ಯ ನಾಯಕರು ಜನರನ್ನು ಯೇಸುವಿನ ವಿರುದ್ಧವಾಗಿ ನಿಲ್ಲಿಸಲು ಈ ಸಮಾಚಾರವನ್ನು ಜನರಲ್ಲಿ ಹರಡಿದ್ದರು. ಎರಡನೆಯದಾಗಿ, ಯೇಸುವಿಗೆ ತನ್ನನ್ನು ತಾನು ಸಿದ್ಧಾಂತ ಪಡಿಸಿಕೊಳ್ಳುವದಕ್ಕಾಗಿ ಸವಾಲು ("ಒಂದು ವೇಳೆ ನೀನು ದೇವರ ಮಗನಾಗಿದ್ದರೆ . . .") ಇದು ಅಡವಿಯಲ್ಲಿ ಸೈತಾನನು ಯೇಸುವಿಗೆ ತಂದ ಶೋಧನೆಯನ್ನು ಜ್ಞಾಪಿಸುತ್ತದೆ (ನೋಡಿರಿ ವ್ಯಾಖ್ಯಾನ 4:3, 6). ಈ ಸಂದರ್ಭದಲ್ಲಿ, ಹಾದುಹೋಗುವವರು ಯೇಸುವಿಗೆ ದೇವರೊಟ್ಟಿಗೆ

ಆತನಿಗಿರುವ ಸಂಬಂಧವನ್ನು ಒಂದು ಅದ್ಭುತವಾದ ಬಲವನ್ನು ಪ್ರದರ್ಶಿಸುವದರ ಮೂಲಕ ಸಾಭೀತುಪಡಿಸಬೇಕೆಂದು ಹಾಸ್ಯ ಮಾಡುತ್ತಿರುವದರು ಹಾಸ್ಯಸ್ಪದವಾಗಿ, ಅವನು ಕ್ರೂಜೆಯಲ್ಲಿ ಇದ್ದನು ಎಂಬ ಸತ್ಯ ಆತನು ಮಗನಾಗಿದ್ದಾನೆ ಎಂಬುದನ್ನು ಸಾಭೀತುಪಡಿಸುತ್ತದೆ. ಅವನು ತಂದೆಯ ಚಿತ್ತಕ್ಕೆ ವಿಧೇಯನಾಗಿ ಉಳಿದನು (ಇಬ್ರಿಯ 5:7-9).

**ವಚನ 41.** ಯೇಸುವಿಗೆ ಅವಮಾನ ಮಾಡಿದ್ದ ಎರಡನೆಯ ಗುಂಪು **ಮಹಾಯಾಜಕರೂ ಶಾಸ್ತ್ರಿಗಳೂ ಹಿರಿಯರನ್ನು ಒಳಗೊಂಡಿತು.** ಈ ಪಟ್ಟಿಯು ಕ್ರಿಸ್ತನು ಸಂಪೂರ್ಣವಾಗಿ ಯೆರೂಸಲೇಮಿನ ನಾಯಕರಿಂದ ತಿರಸ್ಕರಿಸಲ್ಪಟ್ಟಿದ್ದನು ಎಂಬುದನ್ನು ದೃಢಪಡಿಸುತ್ತದೆ. ಕ್ರೂಜೆಯ ಸ್ಥಳದಲ್ಲಿ ಈ ಗೌರವಾನ್ವಿತ ಜನರ ಉಪಸ್ಥಿತಿ ಧಾರ್ಮಿಕ ಸಂಸ್ಥೆಗಳಿಗೆ ಯೇಸುವಿನ ಮೇಲಿದ್ದ ಕೋಪ ಮತ್ತು ವೈರತ್ವ ಆಳವನ್ನು ಪ್ರದರ್ಶಿಸುತ್ತದೆ.[7]

**ಹಾಸ್ಯ ಮಾಡುವದು** (*empaizo* ದಿಂದ) ಎಂಬ ಪದಕ್ಕೆ ಅನುವಾದಿಸಲ್ಪಟ್ಟ ಗ್ರೀಕ್ ಪದ ಒಂದು ಮಗು ಇನ್ನೊಂದು ಮಗುವನ್ನು ಪರಿಕ್ಷೀಸುವಂತೆ ನಟಿಸುವದು ಎಂಬುದಾಗಿದೆ.[8] ಹಾಸ್ಯಸ್ಪದವಾಗಿ, ಈ ವಯಸ್ಸಾದ ಪುರುಷರು, ಯೆಹೂದ್ಯರಲ್ಲಿ ಹೆಚ್ಚು ಆತ್ಮೀಕವಾಗಿ ಪ್ರಭಧ್ಧರಾಗಿರಬೇಕಾಗಿತ್ತು ಅವರು ಅಶಿಸ್ತಿನ ಮಕ್ಕಳಂತೆ ವರ್ತಿಸುತ್ತಿದ್ದರು. ಅವರು ಯೇಸುವಿನ ರಾತ್ರಿಯ ವಿಚಾರಣೆಯ ಸಮಯದಲ್ಲಿ ಅಪರಾಧಿಗಳ ನಡತೆಯಂತೆ ವರ್ತಿಸಿದ್ದರು, ಆತನ ಮೇಲೆ ಉಗುಳುವದು, ಆತನನ್ನು ಮುಷ್ಟಿಯಿಂದ ಗುದ್ದುವದು ಮತ್ತು ಆತನ ಕಪಾಳುಗಳ ಮೇಲೆ ಹೊಡೆಯುವದು (26:67, 68).

ಈ ಮನುಷ್ಯರು, ಯೇಸುವಿನ ಮರಣಕ್ಕೆ ಹೆಚ್ಚು ಜವಾಬ್ದಾರರಾಗಿದ್ದರು, ಆತನನ್ನು ಮೂವತ್ತು ಬೆಳ್ಳಿಯ ನಾಣ್ಯಕ್ಕೆ ಹಿಡಿದುಕೊಡಬೇಕೆಂದು ಯೂದನೊಟ್ಟಿಗೆ ವ್ಯವಹಾರ ಮಾಡಿದವರಾಗಿದ್ದರು (26:14-16). ಆತನ ವಿರುದ್ಧವಾಗಿ ದೂರನ್ನು ತಂದವರು ಮತ್ತು ಆತನಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ಪ್ರಕಟಿಸಿದವರು ಅವರಾಗಿದ್ದರು (26:57-68; ಯೋಹಾನ 19:7). ಅವರು ಪಿಲಾತನಿಗೆ ಅವನನ್ನು ಕ್ರೂಜೆಗೆ ಹಾಕು ಎಂದು ಒತ್ತಾಯಪಡಿಸಿದವರಾಗಿದ್ದರು, ಮತ್ತು ಯೆಹೂದಿ ಜನಸಮೂಹಕ್ಕೆ ಆತನನ್ನು ಕ್ರೂಜೆಗೆ ಹಾಕು ಎಂದು ಕೂಗಲು ಪ್ರೇರೆಪಿಸಿದವರಾಗಿದ್ದರು (27:20-25). ಮನುಷ್ಯನ ದೃಷ್ಟಿಕೋನದಲ್ಲಿ, ಅವರು ಹಗೆ ಮಾಡದಿದ್ದಲ್ಲಿ, ಯೇಸುವನ್ನು ಕ್ರೂಜೆಗೆ ಹಾಕುತ್ತಿರಲಿಲ್ಲ. ಹಾಗು ಯೇಸು ಅವರ ದುಷ್ಟಯೋಜನೆಗಳಿಗೆ ತನ್ನನ್ನು ತಾನು ಒಪ್ಪಿಸಿಕೊಟ್ಟನು ಮತ್ತು ಕ್ರೂಜೆಯನ್ನು ವೇದಿಯಾಗಿ ಬದಲಾಯಿಸುವದರ ಮೂಲಕ, ಕ್ರೂಜೆಗೆ ಮರಣವನ್ನು ದೇವರ ಶಾಶ್ವತವಾದ ಯೋಜನೆಯಲ್ಲಿ ತಂದನು (ನೋಡಿರಿ ಅಪೊಸ್ತಲರ ಕೃತ್ಯಗಳು 2:23, 24).

**ವಚನ 42.** ಯೆಹೂದ್ಯ ನಾಯಕರು ಯೇಸುವನ್ನು, **ಅವನು ಮತ್ತೊಬ್ಬರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಿಕೊಳ್ಳಲಾರನು** ಎಂದು ಹಾಸ್ಯ ಮಾಡಿದರು. ಅವರು ಆತನು ಸೇವಾ ಅವಧಿಯಲ್ಲಿ ಮಾಡಿದ ಅದ್ಭುತಗಳನ್ನು ಹಾಸ್ಯಮಾಡುತ್ತಿದ್ದರು. ಈ ಮಹತ್ತರ ಕೃತ್ಯಗಳು ದೇವರ ಲೋಕದಲ್ಲಿ ನೋವನ್ನು ಅನುಭವಿಸುವವರಿಗೆ ಆತನ ಅನುಕಂಪವನ್ನು ಪ್ರಕಟಿಸಿದವು. ಇದಕ್ಕೂ ಹೆಚ್ಚಾಗಿ, ಇವು ಯೇಸು, ಕ್ರಿಸ್ತನು ಮತ್ತು ದೇವರ ಕುಮಾರನು ಎಂಬ ಆತನ ವ್ಯಕ್ತಿತ್ವದ ಬಲವಾದ ಸಂಕೇತಗಳಾಗಿದ್ದವು (11:2-6; ಯೋಹಾನ 20:30, 31).

ಯೇಸು ಇನ್ನೂ ಅದ್ಭುತವಾದ ಬಲವನ್ನು ಹೊಂದಿದ್ದನು ಒಂದು ವೇಳೆ ಆತನು ಕ್ರೂಜೆಯನ್ನು ತಳ್ಳಿಬಿಟ್ಟರೆ, ಅದನ್ನು ತನ್ನ ಸ್ವಂತ ಜೀವವನ್ನು ಉಳಿಸಿಕೊಳ್ಳಲು ಉಪಯೋಗಿಸಬಹುದಿತ್ತು ಎಂಬುದರಲ್ಲಿ ಸಂಶಯವಿರಲಿಲ್ಲ. ಆತನು ಕಷ್ಟ ಮತ್ತು ಮರಣದ ಪಾತ್ರೆಯನ್ನು ಕುಡಿಯುವದಕ್ಕೆ ಸಮರ್ಪಿಸಿಕೊಂಡಿದ್ದನು. ಅವನು ಮಾನವ ಕುಲವನ್ನು ಪಾಪದಿಂದ ರಕ್ಷಿಸಬೇಕಾಗಿದ್ದರೆ, ಅವನು ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಯೆಹೂದಿ ನಾಯಕರು ಆತನ ಕಾರ್ಯಗಳಲ್ಲಿ ಮತ್ತು ಆತನ ಸಾಮರ್ಥ್ಯದಲ್ಲಿ ಆತನನ್ನು ತಪ್ಪಾಗಿ ನಿರ್ಣಯಿಸಿದರು.

ಹಾಸ್ಯಸ್ಪದವಾಗಿ, ಕ್ರೂರ ಜನರು ಯೇಸುವನ್ನು ಇಸ್ರಾಯೇಲರ ಅರಸನು ಎಂದು ಅಣಕಿಸಿ ಮಾಡಿದರು. ಆತನ ವಿಚಾರಣೆಯಲ್ಲಿ, ಮಹಾಯಾಜಕನಾದ ಕಾಯಫನು ಆತನನ್ನು "ಕ್ರಿಸ್ತನು, ದೇವರ ಮಗನು" ಆಗಿದ್ದಾನೋ ಎಂದು ಕೇಳಿದ್ದನು (26:63). ನಂತರ, ಪಿಲಾತನು ಯೇಸುವನ್ನು "ನೀನು ಯೆಹೂದ್ಯರ ಅರಸನೋ" ಎಂದು ಕೇಳಿದನು (27:11). ಯೇಸು ಎರಡು ಸಂದರ್ಭದಲ್ಲಿ ದೃಢವಾದ ಉತ್ತರವನ್ನು ನೀಡಿದ್ದನು (26:64; 27:11). ಈ ಹೇಳಿಕೆಯು ಸೈನಿಕರು ಯೇಸುವನ್ನು ಹಾಸ್ಯ ಮಾಡುವಾದಲ್ಲಿ ಪ್ರತಿಬಿಂಬಿಸುತ್ತದೆ (27:28-31) ಮತ್ತು ಆತನ ತಲೆಯ ಮೇಲೆ ನೇತು ಹಾಕಿರುವ ದೂರಿನಲ್ಲಿ: "ಈತನು ಯೇಸು, ಯೆಹೂದ್ಯರ ಅರಸನು" (27:37).

ಯೆಹೂದ್ಯ ನಾಯಕರು ಮುಂದುವರಿಸಿ, "ಈಗ ಶಿಲುಬೆಯಿಂದ ಇಳಿದು ಬರಲಿ. ಇಳಿದು ಬಂದರೆ ಅವನಲ್ಲಿ ನಂಬಿಕೆಯಿಟ್ಟೇವು." ಅವರು ಆತನಿಗೆ "ಪರಹಾಸ್ಯ" ಮಾಡುತ್ತಿದ್ದರು (ಲೂಕ 23:35). ಯೇಸು ಅವರಿಗೆ ತಾನು ಯಾರಾಗಿದ್ದಾನೆ ಎಂಬುದನ್ನು ಸಾಭೀತುಮಾಡಲು ಸಾಕಷ್ಟು ಬಲವನ್ನು ಉಪಯೋಗಿಸಿದ್ದನು ಆದಾಗ್ಯೂ ಅವರು ಆತನನ್ನು ತಿರಸ್ಕರಿಸಿದ್ದರು, ಅವನು ಕ್ರೂಜೆಯಿಂದ ಇಳಿದು ಬಂದಿದ್ದರೆ, ಅವರು ತಾವು ಆತನ ವಿಷಯದಲ್ಲಿ ತಪ್ಪಾಗಿದ್ದೇವೆ ಎನ್ನುವದನ್ನು ಒಪ್ಪಿಕೊಳ್ಳುವದಕ್ಕೆ ಬದಲಾಗಿ ಅದಕ್ಕೆ ಇನ್ನೊಂದು ವಿವರಣೆಯನ್ನು ನೀಡುತ್ತಿದ್ದರು, ಕ್ರೂಜೆಯಲ್ಲಿ ಆತನ ಮರಣದಲ್ಲಿ, ಯೇಸು ಕೇವಲ ದೇವರ ಶಾಶ್ವತವಾದ ಯೋಜನೆಯನ್ನು ನೆರವೇರಿಸಲಿಲ್ಲ, ಆತನು ಲೋಕಕ್ಕೆ ಒಂದು ತನ್ನ ಸ್ವಂತ ಬೋಧನೆಯ ಒಂದು ಮಾದರಿಯನ್ನು ಸಹ ನೀಡಿದನು (ನೋಡಿರಿ ವ್ಯಾಖ್ಯಾನ 10:38, 39; 16:24-26).

**ವಚನ 43.** ಅವರು ಮುಂದೆ ಹೀಗೆ ಹೇಳುತ್ತಾರೆ, **ದೇವರಲ್ಲಿ ಭರವಸವಿಟ್ಟಿದ್ದಾನೆ. ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ; ತಾನು ದೇವರ ಮಗನಾಗಿದ್ದೇನೆಂದು ಹೇಳಿದನಲ್ಲಾ** ಅವರ ದೂರು ಶುದ್ಧವಾದ ದೇವದೂಷಣೆಯಾಗಿತ್ತು. ಭಾಷೆಯು ಕೀರ್ತನೆ 22:8 ರೊಂದಿಗೆ ಸಂಬಂಧವನ್ನು ಹೊಂದಿದೆ. ಅದು ಹೀಗೆ ಹೇಳುತ್ತದೆ, "ಯೆಹೋವನು ತನ್ನನ್ನು ರಕ್ಷಿಸುವನೆಂದು ಆತನಲ್ಲಿ ಭರವಸೆವಿಟ್ಟಿದ್ದಾನಲ್ಲಾ; ಆತನು ಇವನನ್ನು ಮೆಚ್ಚಿದ್ದಾದರೆ ರಕ್ಷಿಸಲಿ ಎಂದು ಹೇಳುತ್ತಾರೆ."[9] ಯೆಹೂದ್ಯ ನಾಯಕರು ಯೇಸು ದೇವರ ಮಗನು ಎಂದು ನೀಡಿದ ಹೇಳಿಕೆಯ ಮೇಲೆ ದೋಷಾರೋಪಣೆ ಮಾಡುತ್ತಿದ್ದಾರೆ (26:63, 64). ಅವರು ಒಂದು ವೇಳೆ ಯೇಸು ಆತನನ್ನು ಮೆಚ್ಚಿದ್ದರೆ ಅವನು ರಕ್ಷಿಸಲಿ ಎಂದು ಊಹಿಸುತ್ತಿದ್ದಾರೆ.[10] ಕ್ರಿಸ್ತನು ಏನು ಮಾಡುತ್ತಿದ್ದಾನೆ ಎಂಬುದರ ಕುರಿತು ಎಷ್ಟು ಕಡಿಮೆ ತಿಳುವಳಿಕೆಯನ್ನು ಅವರು ಹೊಂದಿದ್ದರು!

ಜನರ ಗುಂಪಿನಲ್ಲಿ ಇದ್ದ ಇನ್ನಿತರ ಹಾಸ್ಯಮಾಡುವವರು ನೇರವಾಗಿ ಯೇಸುವಿನೊಂದಿಗೆ ಮಾತನಾಡಿದರು, ಯೆಹೂದ್ಯ ನಾಯಕರು ಹಾಗೆ ಮಾಡಲಿಲ್ಲ. ಅವರ ಮಾತುಗಳು ಮೂರು ಸಂದರ್ಭಗಳಲ್ಲಿ, ಅವರು ಒಬ್ಬರೊಟ್ಟಿಗೆ ಇನ್ನೊಬ್ಬರು ಮಾತನಾಡುತ್ತಿದ್ದರು - ಯೇಸುವಿನೊಟ್ಟಿಗೆ ಅಲ್ಲ (27:41-43; ಮಾರ್ಕ 15:31, 32; ಲೂಕ 23:35).

**ವಚನ 44. ಆತನ ಸಂಗಡ ಶಿಲುಬೆ ಹಾಕಲ್ಪಟ್ಟ ಕಳ್ಳರು** ಹಾಸ್ಯ ಮಾಡುವ ಮೂರನೆಯ ಗುಂಪಿನ ಜನರಾಗಿದ್ದರು.[11] ಮೊದಲು, ಇಬ್ಬರು ಯೇಸುವನ್ನು ಹಾಸ್ಯಮಾಡುವದರಲ್ಲಿ ಜೊತೆಗೂಡಿದರು. ಅದೇ ಪದಗಳಿಂದ ಆತನಿಗೆ ಅವಮಾನ ಮಾಡುತ್ತಿದ್ದರು. ಅವರಲ್ಲಿ ಒಬ್ಬನು, "ನೀನು ದೇವರ ಮಗನಾಗಿದ್ದರೆ ನಿನ್ನನ್ನು ರಕ್ಷಿಸಿಕೋ ನಮ್ಮನ್ನು ರಕ್ಷಿಸು" ಎಂದು ಹೇಳಿದನು (ಲೂಕ 23:39).

ಮತ್ತಾಯನು ಕಳ್ಳನ ಮನಸ್ಸಿನಲ್ಲಾದ ಪರಿವರ್ತನೆಯನ್ನು ವರ್ಣಿಸದಿದ್ದಾಗ್ಯೂ ಲೂಕ 23:40-43ರಲ್ಲಿ ವರ್ಣಿಸುತ್ತದೆ. ಯಾವುದು ಆತನ ಮನಸ್ಸನ್ನು ಬದಲಾಯಿಸಿತು ಎಂಬುದನ್ನು ನಮಗೆ ಹೇಳುತ್ತದೆ, ಆದರೆ ಆತನಲ್ಲಿ ಆದ ಬದಲಾವಣೆ ನಿಜವಾದ ಪಶ್ಚಾತ್ತಾಪವನ್ನು ಹುಟ್ಟಿಸುತ್ತದೆ. ತನಗೆ ಅವಮಾನ ಮಾಡುತ್ತಿರುವವರನ್ನು ತನ್ನನ್ನು ಮರಣಕ್ಕೆ ಒಪ್ಪಿಸಿದವರನ್ನು

ಕ್ಷಮಿಸು ಎಂದು ಆತನು ತಂದೆಗೆ ಪ್ರಾರ್ಥಿಸುತ್ತಿರುವದನ್ನು ನೋಡಿ ಆತನು ಆಳವಾದ ಪರಿಣಾಮವನ್ನು ಹೊಂದಿದನು (ಲೂಕ 23:34). ಬಹುಶಃ ಮರಣದ ಸಮಯದಲ್ಲೂ ಯೇಸುವಿನ ನಡತೆಯನ್ನು ನೋಡಿ ಅವನು ಚಲಿಸಿಹೋದನು. ಯಾವುದೇ ಕಾರಣವಿಲ್ಲದೆ ಅವನು ಸ್ವೀಕರಿಸುವ ಹೃದಯ ಮತ್ತು ಕಠಿಣವಾದ ಹೃದಯದ ಮಧ್ಯದಲ್ಲಿರುವ ವ್ಯತ್ಯಾಸವನ್ನು ಪ್ರದರ್ಶಿಸಿದನು. ಅವನು "ಯೇಸುವೇ ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ" ಎಂದು ಹೇಳುತ್ತಾನೆ (ಲೂಕ 23:43).

## ಕ್ರೂಜೆಗೆ ಹಾಕುವ ಕಾರ್ಯದ ಮುಕ್ತಾಯ ಮತ್ತು ಅದರೊಟ್ಟಿಗೆ ಸಂಭವಿಸಿದ ಸೂಚನೆಗಳು (27:45-54)

**45ಮಧ್ಯಾಹ್ನ ಹನ್ನೆರಡು ಘಂಟೆಯಿಂದ ಮೂರು ಘಂಟೆಯ ವರೆಗೆ ಆ ದೇಶದ ಮೇಲೆಲ್ಲಾ ಕತ್ತಲೆ ಕವಿಯಿತು. 46ಸುಮಾರು ಮೂರು ಘಂಟೆಗೆ ಯೇಸು - ಏಲೀ, ಏಲೀ, ಲಮಾ ಸಬಕ್ತಾನೀ, ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ಎಂದು ಮಹಾಧ್ವನಿಯಿಂದ ಕೂಗಿದನು. 47ಅಲ್ಲಿ ನಿಂತಿದ್ದವರಲ್ಲಿ ಕೆಲವರು ಅದನ್ನು ಕೇಳಿ - ಇವನು ಎಲೀಯನನ್ನು ಕರೆಯುತ್ತಾನೆ ಅಂದರು. 48ಕೂಡಲೆ ಅವರಲ್ಲಿ ಒಬ್ಬನು ಓಡಿಹೋಗಿ ಸ್ಪಂಜನ್ನು ತಂದು ಹುಳಿರಸದಿಂದ ತುಂಬಿಸಿ ಕೋಲಿಗೆ ಸಿಕ್ಕಿಸಿ ಆತನಿಗೆ ಕುಡಿಯುವದಕ್ಕೆ ಕೊಟ್ಟನು. 49ಮಿಕ್ಕಾದವರು - ಬಿಡು, ಎಲೀಯನು ಬಂದು ಅವನನ್ನು ರಕ್ಷಿಸುವನೇನೋ ನೋಡೋಣ ಅಂದರು. 50ಯೇಸು ತಿರಿಗಿ ಮಹಾಧ್ವನಿಯಿಂದ ಕೂಗಿ ಪ್ರಾಣಬಿಟ್ಟನು. 51ಆಗ ಇಗೋ ದೇವಾಲಯದ ತೆರೆಯು ಮೇಲಿಂದ ಕೆಳಗಿನ ವರೆಗೂ ಹರಿದು ಎರಡು ಭಾಗವಾಯಿತು; ಭೂಮಿಯು ಅದರಿತು; 52ಬಂಡೆಗಳು ಸೀಳಿಹೋದವು; ಸಮಾಧಿಗಳು ತೆರೆದವು; ನಿದ್ದೆಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು; 53ಮತ್ತು ಆತನು ಎದ್ದ ಮೇಲೆ ಸಮಾಧಿಗಳೊಳಗಿಂದ ಹೊರಗೆ ಬಂದು ಪರಿಶುದ್ಧ ಪಟ್ಟಣದೊಳಕ್ಕೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು. 54ಶತಾಧಿಪತಿಯು ಮತ್ತು ಅವನ ಸಂಗಡ ಯೇಸುವನ್ನು ಕಾಯುತ್ತಿದ್ದವರು ಭೂಕಂಪವನ್ನೂ ನಡೆದ ಸಂಗತಿಗಳನ್ನೂ ನೋಡಿ ಬಹಳ ಹೆದರಿಕೊಂಡು - ನಿಜವಾಗಿ ಈತನು ದೇವಕುಮಾರನಾಗಿದ್ದನು ಅಂದರು.**

**ವಚನ 45.** ಪಿಲಾತನ ಎದುರಿನಲ್ಲಿ ಯೇಸುವಿನ ವಿಚಾರಣೆ 6:00 ಗಂಟೆಗೆ ಪ್ರಾರಂಭವಾಯಿತು, ಮತ್ತು ಕ್ರೂಜೆಗೆ ಹಾಕುವ ಕಾರ್ಯ ಸುಮಾರು 9:00 ಗಂಟೆಗೆ ಜರುಗಿತು (ನೋಡಿರಿ ವ್ಯಾಖ್ಯಾನ 27:1, 35). **ಆರನೇ ತಾಸಿನಿಂದ ಸುಮಾರು ಒಂಭತ್ತನೆ ತಾಸಿನವರೆಗೆ ದೇಶದ ಮೇಲೆಲ್ಲಾ ಕತ್ತಲೆ ಕವಿಯಿತು.** "ಆರನೆ ತಾಸು" ಮಧ್ಯಾಹ್ನ 12:00 ಗಂಟೆಯನ್ನು ಸೂಚಿಸುತ್ತದೆ, ಮತ್ತು "ಒಂಭತ್ತು ತಾಸು" 3:00 ಗಂಟೆಯನ್ನು ಸೂಚಿಸುತ್ತದೆ. ಯೇಸು ಕ್ರೂಜೆಯ ಮೇಲೆ ಆರು ತಾಸುಗಳವರೆಗೆ ಇದ್ದನು. ಇವುಗಳಲ್ಲಿ ಮೂರು ತಾಸುಗಳವರೆಗೆ ಮಧ್ಯಾಹ್ನದಿಂದ ಪ್ರಾರಂಭವಾಗಿ ಭೂಮಿಯ ಮೇಲೆ ಕತ್ತಲಾಯಿತು. ಲೂಕನು ಬರೆಯುತ್ತಾನೆ ಕತ್ತಲಾಯಿತು ಏಕೆಂದರೆ "ಸೂರ್ಯನು ಕಳೆಗುಂದಿದನು" (ಲೂಕ 23:45). "ಕಳೆ ಗುಂದಿದನು" (*ekleipō*) ಎಂಬ ಪದಕ್ಕೆ ಅನುವಾದಿಸಿದ ಗ್ರೀಕ್ ಪದ "ವಿಫಲನಾದನು" ಅಥವಾ "ಸತ್ತು ಹೋದನು" ಎಂದು ಅರ್ಥಕೊಡುತ್ತದೆ. ಕತ್ತಲೆಯು ಹಾಗೂ, ಸಾಮಾನ್ಯವಾದ "ಸೂರ್ಯಗ್ರಹಣ" ದಿಂದಾಗಿ ಅಲ್ಲ. ಇದು ಪಸ್ಕದ ಕಾಲವಾಗಿದ್ದರಿಂದ ಚಂದ್ರನು ಸಂಪೂರ್ಣನಾಗಿದ್ದಾನೆ ಎಂದು ಅಲ್ಲ. ಗ್ರಹಣವಾಗುವದಕ್ಕೆ ಸೂರ್ಯ ಮತ್ತು ಚಂದ್ರ ಬಹಳ ದೂರವಾಗಿದ್ದವು. ಈ ಸಂಗತಿಯು ಅಲೌಕಿಕವಾದ ಘಟನೆಯಾಗಿರಬಹುದು.

ಪ್ರಾಚೀನ ಸತ್ಯವೇದದ ಹೆಚ್ಚಿನ ಮೂಲಗಳು ಇದರ ಕುರಿತಾಗಿ ಮತ್ತು ಯೇಸುವಿನ ಮರಣದ ಸಮಯದಲ್ಲಿ ನಡೆದ ಇತರ ಘಟನೆಗಳ ಕುರಿತಾಗಿ ಮಾತನಾಡುತ್ತವೆ.[12] ನಿರ್ದಿಷ್ಟವಾಗಿ ಆಧಿ ಸಭೆಯ ಬರಹಗಾರ Tertullian ಹೀಗೆ ವಿಮರ್ಶಿಸುತ್ತಾರೆ,

> ಅದೇ ತಾಸಿನಲ್ಲಿ, ಸಹ, ದಿನದ ಬೆಳಕು ತೆಗೆಯಲ್ಪಟ್ಟಿತು, ಸೂರ್ಯನು ಅತ್ಯಂತ ಹೊಳಪಿನಿಂದ ಇರಬೇಕಾದ ಸಮಯದಲ್ಲಿ, ಇದು ಕ್ರಿಸ್ತನ ಕುರಿತಾಗಿ ಪ್ರವಾದಿಸಲ್ಪಟ್ಟಿದೆ ಎಂಬುದನ್ನು ಅರಿಯುವರು, ಅದು ಸೂರ್ಯಗ್ರಹಣ ಎಂದು ತಿಳಿದಿರುವರಲ್ಲಿ ಆಶ್ಚರ್ಯವೇ ನಿಲ್ಲ. *ನಿಮ್ಮಷ್ಟಕ್ಕೆ ನೀವು ಇನ್ನೂ ನಿಮ್ಮ ಸಾರ್ವಜನಿಕ ದಾಖಲೆಯಲ್ಲಿ ಲೋಕದ - ದುರ್ಲಕ್ಷಣ* ಎಂದು ಪರಿಗಣಿಸಿರಬಹುದು (ಒತ್ತಿ ಹೇಳಿರುವದು ಸೇರಿದೆ).[13]

ಮತ್ತಾಯನು ವಿವರಿಸದಿದ್ದಾಗ್ಯೂ, ಆ ದಿವಸದಲ್ಲಿ ಆದ ಕತ್ತಲೆಗೆ ಸಾಕೇತಿಕ ಅರ್ಥವಿರಬಹುದು. ಯೇಸುವಿನ ಪರಿಶುದ್ಧತೆ ಬೆಳಕನ್ನು ಮತ್ತು ದುಷ್ಟತನ ಕತ್ತಲೆಯನ್ನು ಪ್ರತಿನಿಧಿಸುವದರಿಂದ (1 ಯೋಹಾನ 1:5), ಯೇಸು ಕ್ರೂಜೆಯ ಮೇಲೆ ತೂಗುತ್ತಿರುವಾಗ ದೇಶವೆಲ್ಲಾ ಮೂರು ತಾಸಿನವರೆಗೆ ಕತ್ತಲೆಯಿಂದ ತುಂಬಿತ್ತು ಎಂಬ ಸತ್ಯ, ಅವನು ಲೋಕದ ಪಾಪಗಳನ್ನು ಹೊತ್ತುಕೊಂಡಿರುವದರೊಂದಿಗೆ ಸಂಬಂಧವನ್ನು ಹೊಂದಿರಬಹುದು. ವಾಕ್ಯಭಾಗದಲ್ಲಿ ಗೋಳಾಟ ಮತ್ತು ನ್ಯಾಯತೀರ್ಪು ಸಹ ಕತ್ತಲೆಯೊಂದಿಗೆ ಸಂಬಂಧ ಹೊಂದಿದೆ (ಯೆಶಾಯ 5:30; 13:9-11; ಯೋವೇಲ 3:14, 15; ಆಮೋಸ 8:9). ಮಾನವ ಕುಲವು ತನ್ನ ಎಲ್ಲಾ ದುಷ್ಟತನಕ್ಕೆ ಅರ್ಹವಾಗಿರುವ ಶಿಕ್ಷೆಯನ್ನು ಕ್ರೂಜೆಯಲ್ಲಿ ಕ್ರಿಸ್ತನ ಮೇಲೆ ಹಾಕಲಾಯಿತು (ಯೆಶಾಯ 53:5, 6, 10, 11; 2 ಕೊರಿಂಥ 5:21; ಗಲಾತ್ಯ 3:13; 1 ಪೇತ್ರ 2:24; 3:18; 1 ಯೋಹಾನ 2:2; 4:10). ಯೇಸು ಮರಣವನ್ನು ಹೊಂದಿದ ದಿನವು ಮಾನ ಇತಿಹಾಸದಲ್ಲಿ ಕತ್ತಲೆಯ ದಿನವಾಗಿತ್ತು ಎಂಬುದರಲ್ಲಿ ಆಶ್ಚರ್ಯವೇನಿಲ್ಲ!

**ವಚನ 46. ಒಂಬತ್ತನೆಯ ತಾಸಿನ** ಕುರಿತು, ಅದು ಯೇಸು ಮಹಾಧ್ವನಿಯಿಂದ ಕೂಗಿದನು, **ಏಲೀ, ಏಲೀ, ಲಮಾ ಸಬಕ್ತಾನಿ?** ಮತ್ತಾಯನು ಯೆಹೂದಿ ಓದುಗರಿಗೆ ಬರೆದಿದ್ದಾಗ್ಯೂ ಅವರಲ್ಲಿ ಎಲ್ಲರು ಇಬ್ರಿಯಾ (ಅರೆಮಿಕ್) ಭಾಷೆಯಲ್ಲಿ ಪರಿಣಿತರಾಗಿರಲಿಲ್ಲ. ಆದುದರಿಂದ, ಆತನು ಈ ಹೇಳಿಕೆಯನ್ನು ಗ್ರೀಕ್‌ನಲ್ಲಿ ಅನುವಾದಿಸುತ್ತಾನೆ, ಇದು ಸಾಮಾನ್ಯ ಭಾಷೆಯಾಗಿತ್ತು ಮತ್ತು ಹೆಚ್ಚು ಕಡಿಮೆ ಪ್ರತಿಯೊಬ್ಬರು ಇದನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಈ ವೇದನೆಯಿಂದ ಕೂಡಿದ ಕೂಗಿನ ಅರ್ಥ, **ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ** ಯೇಸು ಕೀರ್ತನೆ 22:1ನ್ನು ಉಪಯೋಗಿಸುತ್ತಿದ್ದಾನೆ ಈ ಮೆಸ್ಸೀಯನ ಕೀರ್ತನೆಗೆ ಇತರ ಉಲ್ಲೇಖಗಳು ಈ ಅಧ್ಯಾಯದಲ್ಲಿ ಈಗಾಗಲೇ ಕಂಡು ಬಂದಿವೆ (27:39, 43ರಲ್ಲಿರುವ ವಿಮರ್ಶೆಯನ್ನು ನೋಡಿರಿ).

ಈ ಕೂಗು ಮತ್ತಾಯ ಮತ್ತು ಮಾರ್ಕ ದಾಖಲಿಸಿದ ಯೇಸು ಶಿಲುಬೆಯ ಮೇಲಿನಿಂದ ನೀಡಿದ ಏಕೈಕ ಹೇಳಿಕೆಯಾಗಿದೆ. ಮತ್ತಾಯನ ಸುವಾರ್ತೆ 27:46 "ನನ್ನ ದೇವರೇ" ಎಂಬ ಪದಕ್ಕೆ ಇಬ್ರಿಯ ಪದ ಏಲೀ ಒಳಗೊಂಡಿದೆ. ಅದೇ ಸಮಯದಲ್ಲಿ ಮಾರ್ಕ 15:34 ಅರಮಿಕ್‌ನಿಂದ ತೆಗೆದುಕೊಂಡ ಎಲೋಹಿ ಪದವನ್ನು ಒಳಗೊಂಡಿದೆ. ಲೂಕ ಮತ್ತು ಯೋಹಾನ ಇತರ ಮೂರು ಸಂಗತಿಗಳನ್ನು ಒಳಗೊಂಡಿವೆ ಅವು ಆ ಸಂದರ್ಭದಲ್ಲಿ ವಿಶಿಷ್ಟವಾಗಿದೆ (ಲೂಕ 23:34, 43, 46; ಯೋಹಾನ 19:26, 27, 28, 30) ಒಟ್ಟು ಏಳು ಹೇಳಿಕೆಗಳು.

ಮತ್ತಾಯ ಮತ್ತು ಮಾರ್ಕನ ಸುವಾರ್ತೆಯಲ್ಲಿರುವ ಪದಗಳನ್ನು ಹೇಗೆ ಅರ್ಥೈಸಬೇಕು? ದೇವರು ನಿಜವಾಗಿ ಯೇಸುವನ್ನು ಕೈಬಿಟ್ಟನೋ? ಅವರು ಒಂದೇ ರೀತಿಯ ದೈವಿಕ ಆತ್ಮವನ್ನು ಹಂಚಿಕೊಂಡಿರುವಾಗ ಅವನು ಯೇಸುವನ್ನು ಕೈಬಿಡಬಹುದೋ? ವರ್ಷಗಳಿಂದ ಈ ಪ್ರಶ್ನೆಯ ಚರ್ಚೆಯ ವಿಷಯವಾಗಿದೆ, ಕೆಲವರು ಸಲಹೆ ನೀಡುತ್ತಾರೆ ಯೇಸುವಿಗೆ

ಇಬ್ಬಗೆಯ ಸ್ವರೂಪವಿದ್ದರಿಂದ ಅದು ಅವನನ್ನು ಮನುಷ್ಯನು ಮತ್ತು ಅದೇ ಸಮಯದಲ್ಲಿ ದೈವತ್ವವುಳ್ಳವನನ್ನಾಗಿ ಮಾಡಿತ್ತು. ಯೇಸು ಮಾನವನಾದ ಯೇಸುವಿನಿಂದ ಹೆಚ್ಚು ಕಡಿಮೆ ದೂರವಾಗಿದ್ದನು. ಈ ದೃಷ್ಟಿಕೋನ ಅಸಾಧ್ಯವಾಗಿ ತೋರುತ್ತದೆ. ಇತರರು ಯೇಸು ತನ್ನ ಮಾನವ ಸ್ವರೂಪವನ್ನು ವ್ಯಕ್ತಪಡಿಸುತ್ತಿದ್ದಾನೆ ಆದರೆ ನಿಜವಾಗಿ ಕೈಬಿಡಲ್ಪಟ್ಟಿಲ್ಲ ಎಂದು ಸೂಚಿಸುತ್ತಾರೆ. ಅವನು ತನ್ನಲ್ಲಿರುವ ಕೈಬಿಡಲ್ಪಟ್ಟಿರುವ ಭಾವನೆಯನ್ನು ವ್ಯಕ್ತಪಡಿಸುವದಕ್ಕಾಗಿ ಕೀರ್ತನೆ 22:1ರಲ್ಲಿರುವ ಪದಗಳನ್ನು ಉಲ್ಲೇಖಿಸುತ್ತಿದ್ದಾನೆ ಎಂದು ಸೂಚಿಸುತ್ತಾರೆ.

ದೇವರು ನಿಜವಾಗಿಯೂ ಯೇಸುವನ್ನು ಕೈಬಿಟ್ಟಿರಬಹುದು, ಇದು ಎಷ್ಟು ಸಾಧ್ಯ ಎಂಬುದನ್ನು ವಿವರಿಸಲು ಕಠಿಣವಾಗಿದ್ದಾಗ್ಯೂ, ತಾನು ತನ್ನ ಪರಲೋಕದ ತಂದೆಯಿಂದ ಮೊದಲನೆಯ ಬಾರಿ ಮತ್ತು ಎಲ್ಲಾ ನಿತ್ಯತ್ವದಲ್ಲಿ ಒಂದೇ ಒಂದು ಬಾರಿ ಬೇರ್ಪಟ್ಟಿರುವ ಅನುಭವವನ್ನು ಹೊಂದುತ್ತಿರುವದನ್ನು ಪ್ರಕಟಿಸುವದಕ್ಕಾಗಿ ಯೇಸು ವೇದನೆಯಿಂದ ಕೂಗುತ್ತಿದ್ದಾನೆ. ಮಗನು ಮಾನವ ಕುಲದ ಪಾಪವನ್ನು ತನ್ನ ಮೇಲೆ ತೆಗೆದುಕೊಂಡಾಗ, ತಂದೆಯು ಆತನಿಗೆ ಬೆನ್ನು ತೋರಿಸಿದನು. ಕೆಲವು ಮಾರ್ಗದಲ್ಲಿ ಮತ್ತು ಕೆಲವು ಅರ್ಥದಲ್ಲಿ, ದೇವರು - ಮನುಷ್ಯ ಕ್ರೂಜೆಯ ಮೇಲೆ ಸ್ವಲ್ಪ ಸಮಯದವರೆಗೆ ದೇವರಿಂದ ಪ್ರತ್ಯೇಕಿಸಲ್ಪಟ್ಟನು. ಈ ಸಮಯದಲ್ಲಿ "ಪಾಪರಹಿತನಾದ ಮಗನ ಮೇಲೆ ದೇವರ ಭಯಂಕರವಾದ ಕೋಪವು ಸುರಿಸಲ್ಪಟ್ಟಿತು, ಆತನು ಸರಿಸಾಟಿಯಿಲ್ಲದ ಕರುಣೆಯಿಂದ ತನ್ನನ್ನು ನಂಬುವವರಿಗಾಗಿ ಪಾಪಸ್ವರೂಪಿಯಾದನು."[14]

ಯೇಸುವಿನ ಕೂಗು ಒಂದು ರೀತಿಯಲ್ಲಿ ನಿರಾಶೆಯ ಕೂಗಾಗಿರುವಾಗ ಅದು ವಿಶ್ವಾಸ ಮತ್ತು ನಿರೀಕ್ಷೆಯ ಕೂಗು ಸಹ ಆಗಿತ್ತು. ಇಂಥಹ ಕೈ ಬಿಡಲ್ಪಟ್ಟ ಸ್ಥಿತಿಯ ನಂತರ ಯೇಸು ಕೂಗುತ್ತಾನೆ "ನನ್ನ ದೇವರೇ." ಆತನು ಕೊನೆಯಲ್ಲಿ ತನ್ನನ್ನು ರಕ್ಷಿಸುವಾತನನ್ನು ಎಂದಿಗೂ ತೊರೆಯಲಿಲ್ಲ. ಕೀರ್ತನೆ 22ರಲ್ಲಿರುವ ಯೇಸು ಕ್ರೂಜೆಯ ಮೇಲೆ ಉಪಯೋಗಿಸಿದ ಪದಗಳು ದೇವರ ವಿಮೋಚನೆಯನ್ನು ಆಚರಿಸುವ ಜಯದ ನುಡಿಯೊಂದಿಗೆ ಮುಕ್ತಾಯವಾಗುತ್ತದೆ: ಕೀರ್ತನೆ 22:22 ಇಬ್ರಿಯಾ 2:12ರಲ್ಲಿ ಯೇಸುವಿನ ಹೇಳಿಕೆಯಾಗಿ ಉಲ್ಲೇಖಿಸಲಾಗಿದೆ, "ನಿನ್ನ ನಾಮ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು; ಸಭಾಮಧ್ಯದಲ್ಲಿ ನಿನಗೆ ಸ್ತುತಿಪದಗಳನ್ನು ಹಾಡುವೆನು."

**ವಚನ 47.** ಯೇಸು ಕ್ರೂಜೆಯ ಮೇಲೆ ತೂಗಾತ್ತಿರುವಾಗ, ಉಸಿರಾಡಲು ಕಷ್ಟಪಡುತ್ತಿದ್ದನು, ಆತನ ಮಾತುಗಳನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತಿತ್ತು. J. W. McGarvey ರವರು ಯೇಸುವಿನ ಕುರಿತಾಗಿ ಹೀಗೆ ಹೇಳುತ್ತಾರೆ:

> ಈಗ ಆತನು ಆರು ತಾಸುಗಳಿಂದ ಕ್ರೂಜೆಯ ಮೇಲಿದ್ದಾನೆ ಮತ್ತು ಆತನು ಅನುಭವಿಸಿದ ತೀವ್ರವಾದ ಕಷ್ಟಾನುಭವದಿಂದಾಗಿ ಆತನಿಗೆ ಅತಿಯಾದ ಬಾಯಾರಿಕೆ ಉಂಟಾಗಿದೆ ಮತ್ತು ರಕ್ತಸುರಿಸಿದ್ದರಿಂದಾಗಿ ಮತ್ತು ತನ್ನ ಎರಡು ಕೈಗಳನ್ನು ಚಾಚಿ ಕ್ರೂಜೆಯ ಮೇಲೆ ತೂಗುತ್ತಿರುವದರಿಂದಾಗಿ ಆತನ ಎದೆಯ ಮಾಂಸಖಂಡಗಳ ಮೇಲೆ ಬಿದ್ದ ಅತಿಯಾದ ಒತ್ತಡದಿಂದಾಗಿ, ಆತನಿಗೆ ಬಹುಶಃ ಸ್ಪಷ್ಟೋಚ್ಚಾರಣೆ ಕಠಿಣವಾಗಿದೆ ಮತ್ತು ಅಸ್ಪಷ್ಟವಾಗಿದೆ.[15]

ಯೇಸು "ನನ್ನ ದೇವರ" (ಎಲೀ) ಎಂದು ಕೂಗುವಾಗ, ಅಲ್ಲಿ **ನಿಂತಿರುವಾಗ ಕೆಲವರು** ಆತನ ಮಾತುಗಳನ್ನು ತಪ್ಪಾಗಿ ಅರ್ಥಮಾಡಿಕೊಂಡರು. ಅವರು, **ಈ ಮನುಷ್ಯನು ಎಲೀಯನನ್ನು ಕರೆಯುತ್ತಿದ್ದಾನೆ** ಅಂದರು. ಪ್ರವಾದಿಯು ಮರಣವನ್ನು ಅನುಭವಿಸದೇ ಹೋದದ್ದರಿಂದ (2 ಅರಸುಗಳು 2:11, 12) ಮತ್ತು "ಎಲೀಯನು" ತಿರುಗಿ ಬರುತ್ತಾನೆ ಎಂದು ಮುನ್‌ಸೂಚಿಸಲಾಗಿತ್ತು (ಮಲಾಕಿ 4:5), ಯೆಹೂದ್ಯರು ಆತನು ಈ ಲೋಕಕ್ಕೆ ಹಿಂತಿರುಗಿ ಬರುವದನ್ನು ನಿರೀಕ್ಷಿಸುತ್ತಿದ್ದರು (ನೋಡಿರಿ ವ್ಯಾಖ್ಯಾನ 11:14; 16:14; 17:3). ಹಿಂಸೆಗೆ

ಒಳಗಾದ ನೀತಿವಂತರಿಗೆ ಎಲೀಯನು ಸಹಾಯ ಮಾಡುತ್ತಾನೆ ಎಂದು ನಂಬಿದ್ದರು. ಅವನು ತನ್ನನ್ನು ಮರಣದಿಂದ ತಪ್ಪಿಸುತ್ತಾನೆ ಮತ್ತು ಹಿಂಸೆಗೆ ಒಳಗಾದ ತನ್ನವರಿಗೆ ಬಿಡುಗಡೆಯನ್ನು ನೀಡುತ್ತಾನೆ ಎಂದು ಯೇಸು ಎಲೀಯನನ್ನು ಕೂಗುತ್ತಿದ್ದಾನೆಂದು ಯೇಸುವನ್ನು ಅರ್ಥಮಾಡಿಕೊಂಡಿದ್ದವರು ತಿಳಿದುಕೊಂಡಿದ್ದರು.

**ವಚನ 48.** ಅಲ್ಲಿನಿಂತಿದ್ದವನು ಅಥವಾ ಒಬ್ಬ ಸೈನಿಕನು ಯೇಸುವಿಗೆ ಪಾನೀಯವನ್ನು ನೀಡಲು ಅವಸರಿಸಿದನು. ಒಂದು ವೇಳೆ ಎಲೀಯನು ಬಂದರೆ ತಾನು ಒಳ್ಳೆಯವನಾಗಿರಬೇಕೆಂದು ಆತನು ಬಯಸಿದ್ದನು ಎಂದು ಸೂಚಿಸುತ್ತದೆ. ಆ ಮನುಷ್ಯನು **ಸ್ಪಂಜನ್ನು** ತೆಗೆದುಕೊಂಡು **ಹುಳಿ ರಸದಲ್ಲಿ** (*oxos*) ಅದ್ದಿ ಕೋಲಿಗೆ ಸಿಕ್ಕಿಸಿ ಎತ್ತಿ ಕರ್ತನ ಬಾಯಿಗೆ ಮುಟ್ಟಿಸಿದನು. ಇದು ಯೇಸು "ನನಗೆ ನೀರಡಿಕೆಯಾಗಿದೆ" (ಯೋಹಾನ 19:28) ಎಂದು ಹೇಳಿದ ನಂತರ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಆತನು ಕಹಿ ಬೆರೆಸಿದ ದ್ರಾಕ್ಷಾರಸವನ್ನು (*oinos*) ನಿರಾಕರಿಸಿದನು (27:34), ಆತನು ಹುಳಿ ದ್ರಾಕ್ಷಾರಸವನ್ನು ಕುಡಿದನು (ಯೋಹಾನ 19:30). ಈ ಸಂಗತಿ ಕೀರ್ತನೆ 69:21ನ್ನು ಪ್ರತಿಬಿಂಬಿಸುತ್ತದೆ. ಅಲ್ಲಿ, ". . . ನನಗೆ ಬಾಯಾರಿದಾಗ ಹುಳಿ ದ್ರಾಕ್ಷಾರಸವನ್ನು ಕೊಟ್ಟರು" ಎಂದು ಹೇಳುತ್ತದೆ.

ಆತನಿಗೆ ನೀಡಿದ ಪಾನೀಯವು ಕಡಿಮೆ ಕ್ರಯದ ದ್ರಾಕ್ಷಾರಸವಾಗಿರಬಹುದು. ಅದನ್ನು ನೀರಿನೊಂದಿಗೆ ಬೆರಸಿರಬಹುದು, ಇದನ್ನು ರೋಮನ್ ಸೈನಿಕರು ಕುಡಿಯುತ್ತಿದ್ದರು (ನೋಡಿರಿ ಲೂಕ ಲೂಕ 23:36). ಅದನ್ನು ದ್ರವೀಕರಿಸಿರುವದರಿಂದ, ಅದು ಯೇಸುವಿನ ನೀರಡಿಕೆಯನ್ನು ತಣಿಸುವದು ಮಾತ್ರವಲ್ಲ ಬದಲಾಗಿ ಆತನ ತುಟಿಗಳನ್ನು ಹಸಿಮಾಡಲು ಸಹಾಯವಾಗುತ್ತದೆ ಇದರಿಂದಾಗಿ ಆತನು ಮಾತನಾಡಿದ ಮಾತುಗಳು ಸ್ಪಷ್ಟವಾಗಿ ಕೇಳುತ್ತವೆ ಮತ್ತು ಅರ್ಥವಾಗುತ್ತದೆ.

**ವಚನ 49.** ಸಹಜವಾಗಿ, ಯೇಸು ಎಲೀಯನನ್ನು ಕೂಗುತ್ತಿದ್ದಾನೆ ಎಂದು ಹೇಳಿದವರು ಹೆಚ್ಚು ಎಚ್ಚರಿಕೆಯಿಂದ ಇದ್ದರು. ಅವರು, **ಎಲೀಯನು ಬಂದು ಅವನನ್ನು ರಕ್ಷಿಸುತ್ತಾನೋ ಏನೋ ನೋಡೋಣ** ಎಂದು ಹೇಳಿದರು. ಬಹುಶಃ ಅವರು ಪ್ರವಾದಿಯು ನಿಜವಾಗಿ ಹಿಂತಿರುಗಿ ಬರುತ್ತಾನೆ ಎಂದು ನಂಬಿದ್ದರು, ಇಲ್ಲವೇ ಅವರು ಕೇವಲ ಯೇಸುವನ್ನು ಹಾಸ್ಯಮಾಡುತ್ತಿದ್ದರು.

**ವಚನ 50.** ಇದಾದ ತಕ್ಷಣ, **ಯೇಸು ಮತ್ತೇ ಮಹಾ ಧ್ವನಿಯಿಂದ ಕೂಗಿದನು,** "ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸುತ್ತೇನೆ" (ಲೂಕ 23:46). "ವಶಕ್ಕೆ ಒಪ್ಪಿಸಿಕೊಡು" ಅಥವಾ "ಸುರಕ್ಷಿತೆಗಾಗಿ ಒಪ್ಪಿಸಿಕೊಡು" ಇದರ ಅರ್ಥ "ಬಿಟ್ಟುಬಿಡು" ಅಥವಾ "ವಶಪಡಿಸು." ಯೇಸು "ಮಹಾಧ್ವನಿಯಿಂದ" ಕೂಗುವದರ ಉಲ್ಲೇಖ ಬಹುಶಃ ಆತನು "ತೀರಿತು" (ಯೋಹಾನ 19:30) ಎಂದು **ಉದ್ಗರಿಸಿದನ್ನು** ಸೂಚಿಸುತ್ತದೆ. ಈ ಜಯದ ಕೂಗಿನ ಹಿಂದೆಯೇ ಆತನು "ತನ್ನ ತಲೆಯನ್ನು ಬಾಗಿಸಿದನು" (ಯೋಹಾನ 19:30) ಮತ್ತು ತನ್ನ ಆತ್ಮವನ್ನು ಒಪ್ಪಿಸಿಕೊಟ್ಟನು. ಇಲ್ಲಿ ಆತನನ್ನು ಕಳುಹಿಸಲ್ಪಟ್ಟ ಕಾರ್ಯ ಪೂರ್ಣವಾಯಿತು. ಯೇಸು ಹೇಳಿದ್ದು, ನನ್ನ ಪ್ರಾಣವನ್ನು ಯಾರು ನನ್ನಿಂದ ತೆಗೆಯರು; ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ತಿರುಗಿ ಪಡೆದುಕೊಳ್ಳುತ್ತೇನೆ ಎಂದು ಹೇಳಿದನು (ಯೋಹಾನ 10:15-17). ಆತನು ತನ್ನ ಆತ್ಮವನ್ನು ಮರಣಕ್ಕೆ ಒಪ್ಪಿಸುವದರ ಮತ್ತು ನಂತರ ಮೂರನೇ ದಿನದಲ್ಲಿ ಸತ್ತವರೊಳಗಿಂದ ಎದ್ದು ಬರುವದರ ಮೂಲಕ ತನ್ನ ವಾಗ್ದಾನವನ್ನು ನೆರವೇರಿಸಿದನು.

**ವಚನ 51.** ಮಧ್ಯಾಹ್ನ 12:00 ಗಂಟೆಯಿಂದ 3:00 ಗಂಟೆಯವರೆಗೆ ಲೋಕದಲ್ಲಿ ಕತ್ತಲೆ ಕವಿದಿತ್ತು (27:45). ಶಿಲುಬೆಯೊಂದಿಗೆ ಅನೇಕ ಅದ್ಭುತ ಕಾರ್ಯಗಳು ಸಂಭವಿಸಿದವು. ಪರಿಶುದ್ಧ ಸ್ಥಳ ಮತ್ತು ಅತೀ ಪರಿಶುದ್ಧ ಸ್ಥಳವನ್ನು ವಿಭಾಗಿಸುವ **ದೇವಾಲಯದ ತೆರೆ** (ವಿಮೋಚನಕಾಂಡ 26:31-33; ಇಬ್ರಿಯ 9:3). **ಮೇಲಿನಿಂದ ಕೆಳಗಿನವರೆಗೆ ಎರಡು ಭಾಗವಾಗಿ**

**ಹರಿಯಿತು.** ಮಿಶ್ನಾದ ಪ್ರಕಾರ, ಈ ವಿಶಾಲವಾದ ತೆರೆ “ಎಪ್ಪತ್ತೆರಡು ಹುರಿಗಳೊಂದಿಗೆ ನೇಯ್ದ ಬಟ್ಟೆಯಾಗಿತ್ತು ಮತ್ತು ಪ್ರತಿಯೊಂದು ಹುರಿಯು ಇಪ್ಪತ್ತು ನಾಲ್ಕು ದಾರದ ಎಳೆಗಳಿಂದ ಮಾಡಲ್ಪಟ್ಟಿತ್ತು. ಅದು ನಲವತ್ತು ಮೊಳ (ಅರವತ್ತು ಅಡಿ) ಉದ್ದವಾಗಿತ್ತು ಮತ್ತು ಇಪ್ಪತ್ತು ಮೊಳ (ಮೂವತ್ತು ಅಡಿ) ಅಗಲವಾಗಿತ್ತು.”[16] ಯೋಸೇಫಸ್‌ನು ಅದನ್ನು, “ಬಾಬೇಲಿನ ತೆರೆ ಎಂದು, ಅದರ ಮೇಲೆ ನೀಲಿ ಮತ್ತು ಕಡುಕೆಂಪು ಮತ್ತು ನೇರಳೆ ಬಣ್ಣದ ಉತ್ತಮವಾದ ದಾರದಿಂದ ಕಸೂತಿ ಮಾಡಲಾಗಿತ್ತು ಮತ್ತು ಅದರ ನೇಯಗೆ ನಿಜವಾಗಿ ಅದ್ಭುತವಾಗಿತ್ತು ಎಂದು ವರ್ಣಿಸುತ್ತಾನೆ.”[17]

ತೆರೆ ಹರಿದು ಹೋಗಿರುವದು ಮತ್ತಾಯನ ಸುವಾರ್ತೆಯಲ್ಲಿ ವಿವರಿಸದೇ ಹೋದಾಗ್ಯೂ ಶ್ರೇಷ್ಠವಾದ ವೈಶಿಷ್ಟತೆಯನ್ನು ಹೊಂದಿದೆ. ಇದು ಹಳೆ ಒಡಂಬಡಿಕೆಯ ಲೇವಿಯರ ಯಾಜಕತ್ವದ ಮತ್ತು ಯಜ್ಞವನ್ನು ಅರ್ಪಿಸುವ ಪದ್ಧತಿಯ ಅಂತ್ಯವನ್ನು ಸೂಚಿಸುತ್ತದೆ. ಯೇಸುವಿನ ಪ್ರವಾದನೆಗೆ ಅನುಗುಣವಾಗಿ (24:1, 2), ದೇವಾಲಯವೇ ಕ್ರಿ.ಶ. 70ರಲ್ಲಿ, ನಾಶನ ಪ್ರಾಣಿಗಳ ಬಲಿಯನ್ನು ಅರ್ಪಿಸುವ ಪದ್ಧತಿಗೆ ಮಂಗಳ ಹಾಡಿತು. ಯೇಸು ಮರಣ ಹೊಂದಿದಾಗ ತೆರೆಹರಿಯಲ್ಪಟ್ಟಿದ್ದು ಆತನ ಬಲಿದಾನ ಜನರಿಗೆ ದೇವರನ್ನು ಸಂಧಿಸಲು ಹೊಸ ಮತ್ತು ಪರಿಪೂರ್ಣವಾದ ಮಾರ್ಗವನ್ನು ನೀಡಿತು. ಇಬ್ರಿಯ ಪತ್ರಿಕೆಯ ಬರಹಗಾರನು ತೆರೆ ಹರಿದು ಹೋದ ಕಲ್ಪನೆಯನ್ನು, ನಮ್ಮ ಯೇಸುವನ್ನು ಶ್ರೇಷ್ಟ ಮಹಾಯಾಜಕನನ್ನಾಗಿ ತೋರಿಸುವದಕ್ಕೆ ಉಪಯೋಗಿಸುತ್ತಾನೆ:

> ಆ ನಿರೀಕ್ಷೆಯು ತನ್ನ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸಕ್ಕೆ ಯೋಗ್ಯವಾದದ್ದು ಸ್ಥಿರವಾದದ್ದೂ ಆಗಿದೆ, ಅದು ತೆರೆಯೋಗಣ ದೇವ ಸಾನಿದ್ಯವನ್ನು ಪ್ರವೇಶಿಸುವಂಥದ್ದು. ಯೇಸು ಸದಾಕಾಲವು ಮೇಲ್ಕಿಜೆದೇಕನ ತರಹದ ಮಹಾಯಾಜಕನಾಗಿದ್ದು ನಮಗೋಸ್ಕರ ಮುಂದಾಗಿ ಹೋಗಿ ಆ ಸಾನಿದ್ಯವನ್ನು ಪ್ರವೇಶಿಸಿದ್ದಾನೆ (ಇಬ್ರಿಯ 6:19, 20; ಒತ್ತಿ ಹೇಳಿರುವದು ಸೇರಿಸಲಾಗಿದೆ).

ಇಬ್ರಿಯ ಗ್ರಂಥ ಕರ್ತನು, “ಯೇಸುವಿನ ರಕ್ತದಿಂದ ನಾವು ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸುತ್ತೇವೆಂಬ ಭರವಸೆ ನಮಗಿದೆ. *ನಮಗಾಗಿ ತೆರೆಯ* ಮುಖಾಂತರ ಹೊಸ ಮತ್ತು ಶಾಶ್ವತವಾದ ಮಾರ್ಗವನ್ನು ಆರಂಭಿಸಿದ್ದಾನೆ. ಅದುವೆ ಆತನ ದೇಹಾಗಿದೆ” (ಇಬ್ರಿಯ 10:19, 20; ಒತ್ತಿ ಹೇಳಿರುವದು ಸೇರಿದೆ).

ತೆರೆ ಹರಿದು ಹೋಗಿರುವದನ್ನು ಅವರು “ದೈವಶಾಸ್ತ್ರವು ವೈಶಿಷ್ಟತೆಯನ್ನು ಹೊಂದಿರುವ ಘಟನೆ” ಎಂದು ಕರೆಯುತ್ತಾರೆ ಮತ್ತು ನಂತರ “ಯೇಸುವಿನ ಮರಣದಲ್ಲಿ ... ದೇವರು ತಾನೇ ನಮಗೆ ತನ್ನನ್ನು ಪ್ರಕಟಿಸಿದ್ದಾನೆ ಮತ್ತು ಆತನ ಬಳಿಗೆ ಹೋಗುವ ಮಾರ್ಗವು ವಿಶಾಲವಾಗಿ ತೆರೆಯಲ್ಪಟ್ಟಿದೆ.”[18] ಯೇಸುವಿನ ಬಲಿದಾನ ಹಳೆ ಒಡಂಬಡಿಕೆಯ ಅಡೆತಡೆಗಳನ್ನು ತೆಗೆದುಹಾಕಿ; ಇದು ಬಲಿದಾನ ಮತ್ತು ನಿಯಮಗಳ ಯುಗಕ್ಕೆ ಅಂತ್ಯ ಹಾಡಿತು ಮತ್ತು ದೇವರ ಪ್ರಸನ್ನತೆಯಲ್ಲಿ ಪ್ರವೇಶಿಸುವ ಮಾರ್ಗವನ್ನು ನಿಮಗೆ ತೆರೆಯಿತು (ನೋಡಿರಿ ಕೊಲಸ್ಸೆ 2:14; ಇಬ್ರಿಯ 8:13).

ಯೇಸು ಮರಣ ಹೊಂದಿದಾಗ ಸಂಭವಿಸಿದ ಇನ್ನೊಂದು ಅದ್ಭುತ ಭೂಕಂಪ ಅದು **ಬಂಡೆಗಳು ಸೀಳುವದಕ್ಕೆ** ಕಾರಣವಾಯಿತು. ಕೇವಲ ಮತ್ತಾಯನ ಕಥಾನಕ ಈ ಅದ್ಭುತವನ್ನು ದಾಖಲಿಸುತ್ತದೆ, ಕೆಲವರು ಭೂಕಂಪವು ದೇವಾಲಯದ ತೆರೆಹರಿದ್ದರಿಂದಾಗಿ ಎಂದು ಭಾವಿಸುತ್ತಾರೆ, ಆದರೆ ಪಠ್ಯವು ಇದರ ಕುರಿತಾಗಿ ನಿರ್ಧಿಷ್ಟವಾಗಿ ಹೇಳುವದಿಲ್ಲ.

**ವಚನಗಳು 52, 53.** ಸಮಾಧಿಗಳು ತೆರೆದಿರುವದು ಸಹ ಭೂಕಂಪದ ನೇರ ಪರಿಣಾಮವಾಗಿರ ಬಹುದು. ಆದಾಗ್ಯೂ ಸತ್ತವರ ಪುನರುತ್ಥಾನ ಒಂದು ಪ್ರತ್ಯೇಕ ಅದ್ಭುತವಾಗಿದೆ. **ನಿದ್ದೆಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು,** ಪುನರುತ್ಥಾನ ಹೊಂದಿದ

ಈ ಜನರು ಯೆರೂಸಲೇಮಿನಲ್ಲಿ ಯೇಸು ಪುನರುತ್ಥಾನ ಹೊಂದುವವರೆಗೆ ಕಾಣಿಸಿಕೊಳ್ಳದೇ ಹೋದಾಗ್ಯೂ, ನಾವು ಈ ವ್ಯಕ್ತಿಗಳು ತೀರಿಹೋಗಿ ಸ್ವಲ್ಪ ಸಮಯವಾಗಿರ ಬಹುದು ಮತ್ತು ಅವರು ಇತರರಿಗೆ ಪರಿಚಯವುಳ್ಳವರಾಗಿರಬಹುದು ಎಂಬುದನ್ನು ನಾವು ಊಹಿಸಿಕೊಳ್ಳಬಹುದು; ಇಲ್ಲವಾದಲ್ಲಿ ಅವರನ್ನು ನೋಡಿದವರಿಗೆ ಅವರ ಪುನರುತ್ಥಾನದ ವೈಶಿಷ್ಟತೆ ನಷ್ಟವಾಗಿ ಹೋಗುತ್ತದೆ. ಅವರು ಲಾಜರನಂತೆ (ಯೋಹಾನ 11:43, 44; 12:2), ತಮ್ಮ ಮೊದಲಿನ ಜೀವಿತದ ಸನ್ನಿವೇಶಕ್ಕೆ ಹಿಂತಿರುಗಿರಬಹುದಾದ ಸಾಧ್ಯತೆಯಿದೆ.

ಕತ್ತಲೆ ಯೇಸುವನ್ನು ಪಾಪವನ್ನು ಹೊತ್ತವನು ಎಂದು ಸೂಚಿಸಿದ್ದಾಗ್ಯೂ (27:45) ಮತ್ತು ದೇವಾಲಯದ ತೆರೆ ಹರಿದು ಹೋದದ್ದು ದೇವರೆಡೆಗೆ ಹೊಸ ಮಾರ್ಗವನ್ನು ಸೂಚಿಸಿದ್ದಾಗ್ಯೂ (27:51), ಈ ಪವಿತ್ರ ಜೀವಿಗಳ ಪುನರುತ್ಥಾನ ಎಲ್ಲಾ ನಂಬಿಗಸ್ತ ವಿಶ್ವಾಸಿಗಳು ನಿತ್ಯಜೀವದ ಪೂರ್ವಛಾಯೆಯಾಗಿದೆ. ಕ್ರಿಸ್ತನ ಮರಣ ಮತ್ತು ಪುನರುತ್ಥಾನದಿಂದಾಗಿ ಭವಿಷ್ಯತ್ತಿನ ಪುನರುತ್ಥಾನ ಸಾಧ್ಯವಾಗಿದೆ.

**ವಚನ 54. ಭೂಕಂಪ** - ಅಲ್ಲಿ ಸಂಭವಿಸುತ್ತಿರುವ ಇತರ ಘಟನೆಗಳೊಂದಿಗೆ ಮತ್ತು ಯೇಸು ಮರಣ ಹೊಂದಿದ ರೀತಿಯಿಂದಾಗಿ (ಮಾರ್ಕ 15:39) - **ಕ್ರೂಜೆಗೆ ಹಾಕುವದರ** ಮೇಲ್ವಿಚಾರಕನಾಗಿದ್ದ ಶತಾಧಿಪತಿಯು ಆಳವಾದ ಪರಿಣಾಮವನ್ನು ಹೊಂದಿದನು. ಅವು ಯೇಸುವನ್ನು ಕಾವಲು ಕಾಯುತ್ತಿದ್ದ ಕಾವಲುಗಾರರ ಮೇಲೆ ಸಹ ಅಗಾಧವಾದ ಪರಿಣಾಮವನ್ನು ಬೀರಿದವು. ಕ್ರೂಜೆಗೆ ಹಾಕುವ ನೂರಾರು ಘಟನೆಗಳಿಗೆ ಸಾಕ್ಷಿಗಳಾಗಿದ್ದ **ಈ ಕಠಿಣ ಮನುಷ್ಯರು, ಬಹಳವಾಗಿ ಭಯಪಟ್ಟು, ನಿಜವಾಗಿಯೂ ಈತನು ದೇವರ ಕುಮಾರನಾಗಿದ್ದಾನೆ** ಎಂದು ಹೇಳಿದರು (ನೋಡಿರಿ ವ್ಯಾಖ್ಯಾನಗಳು 14:33; 16:16). ಮಾರ್ಕನ ಸುವಾರ್ತೆಯಲ್ಲಿ, ಈ ಹೇಳಿಕೆಯು ಕೇವಲ ಶತಾಧಿಪತಿಗೆ ಸಲ್ಲಿಸಲಾಗಿದೆ (ಮಾರ್ಕ 15:39). ಸೈನಿಕರ ಸಮೂಹವು ಯೇಸುವಿನ ದೈವತ್ವದ ಕುರಿತು ತಮ್ಮ ನಂಬಿಕೆಯ ಧ್ವನಿಯನ್ನು ಎತ್ತಿದಾಗ ಆತನು ಅವರನ್ನು ನಡೆಸಿರಬಹುದು.

## ದೂರದಿಂದ ಯೇಸುವನ್ನು ವೀಕ್ಷಿಸುತ್ತಿರುವ ಸ್ತ್ರೀಯರು (27:55, 56)

**[55]ಇದಲ್ಲದೆ ಅನೇಕ ಸ್ತ್ರೀಯರು ಅಲ್ಲಿ ಇದ್ದು ದೂರದಿಂದ ನೋಡುತ್ತಿದ್ದರು. ಇವರು ಯೇಸುವಿನ ಸೇವೆಮಾಡುತ್ತಾ ಗಲಿಲಾಯದಿಂದ ಆತನ ಹಿಂದೆ ಬಂದಿದ್ದರು. [56]ಇವರಲ್ಲಿ ಮಗ್ದಲದ ಮರಿಯಳೂ ಯಾಕೋಬ ಯೋಸೆಯರ ತಾಯಿಯಾದ ಮರಿಯಳೂ ಜೆಬೆದಾಯನ ಮಕ್ಕಳ ತಾಯಿಯೂ ಇದ್ದರು.**

**ವಚನ 55. ಅನೇಕ ಸ್ತ್ರೀಯರು** ಕ್ರಿಸ್ತನ ಕ್ರೂಜೆಯ ಮರಣವನ್ನು ವೀಕ್ಷಿಸುತ್ತಿದ್ದರು (ಮಾರ್ಕ 15:40, 41; ಲೂಕ 23:49; ಯೋಹಾನ 19:25-27). ಅತನು **ಇವರು ಯೇಸುವಿನ ಸೇವೆಮಾಡುತ್ತಾ ಗಲಿಲಾಯದಿಂದ ಆತನ ಹಿಂದೆ ಬಂದಿದ್ದರು.** "ಸೇವೆ ಮಾಡು" (*diakoneō*) ಎಂಬುದಕ್ಕೆ ಗ್ರೀಕ್ ಪದವಾಗಿದೆ ಇದನ್ನು "ಒದಗಿಸುವದು" ಎಂದು ಸಹ ಅನುವಾದಿಸಬಹುದಾಗಿದೆ. (ನೋಡಿರಿ NRSV) ಅಥವಾ "ಕಾಳಜಿವಹಿಸು" (NLT) ಅವರು ತಮ್ಮ ಹಮದಿಂದ ಆತನಿಗೆ ಸಹಾಯ ಮಾಡಿದರು ಎಂಬುದು ವಿಚಾರವಾಗಿರಬಹುದು (ಲೂಕ 8:1-3). ಅಥವಾ ಅವರು ಆತನ ಆಹಾರವನ್ನು ಸಿದ್ಧಪಡಿಸಿದರು (ಲೂಕ 10:40). ಬಹುಶಃ ಅವರು ಎರಡನ್ನೂ ಮಾಡಿದರು.

ಅಪೊಸ್ತಲರಂತೆ ಗೆತ್ಸೆಮನೆಯಿಂದ ಓಡಿಹೋಗದೇ ಇರುವವರು (26:56), ಈ ಧೈರ್ಯವಂತ ಸ್ತ್ರೀಯರು ಯೇಸುವಿಗೆ ಪ್ರಾಮಾಣಿಕರಾಗಿದ್ದರು. ಪ್ರೀತಿಯಿಂದ ಪ್ರೇರಿತರಾಗಿ, ಅವರು ತಮ್ಮ ವ್ಯಯಕ್ತಿಕ ಹೆಮ್ಮೆಯನ್ನು ಮತ್ತು ಸುರಕ್ಷಿತತೆಯನ್ನು ಆತನೊಂದಿಗೆ ಕೊನೆಯವರೆಗೆ ಇರುವದಕ್ಕಾಗಿ ಬಿಟ್ಟು ಬಿಡಲು ಸಿದ್ಧರಾಗಿದ್ದರು. ಅವರು **ದೂರದಲ್ಲಿ** ನಿಂತುಕೊಂಡಿದ್ದರು ಆದರೆ

ಭಯದಿಂದಾಗಿ ಅಲ್ಲ ಎಂಬುದು ಸತ್ಯವಾಗಿತ್ತು. ರೋಮನ್ ಬಹುಶಃ ಜನರು ಕ್ರೂಜೆಯ ಸಮೀಪಕ್ಕೆ ಬರಬಾರದೆಂದು - ವಿಶೇಷವಾಗಿ ಆತನ ಮೇಲೆ ಅನುಕಂಪವುಳ್ಳವರು ಕ್ರೂಜೆಯ ಸುತ್ತಲು ಒಂದು ಮಿತಿಯನ್ನು ಹಾಕಿರಬಹುದು. ಯೇಸುವಿಗೆ ಕ್ರೂಜೆಯ ಮೇಲೆ ಹಿಂಸೆಯನ್ನು ಅನುಭವಿಸುತ್ತಿರುವ ಕಣ್ಣುಗಳಿಂದ ಹೇಸಿಗೆ ತರುವ ದೃಶ್ಯಾದಿಂದಾಚೆಗೆ ತನ್ನ ಮರಣಕ್ಕಾಗಿ ಪ್ರಲಾಪಿಸುತ್ತಿರುವ ಈ ನಂಬಿಗಸ್ತ ಸ್ತ್ರೀಯರನ್ನು ನೋಡುವಾಗ ಎಂಥಹಾ ಒಂದು ಸಂತಾಪ ಯೇಸುವಿಗೆ ದೊರೆಯುತ್ತಿರಬಹುದು!

**ವಚನ 56.** ಮತ್ತಾಯನ ಸುವಾರ್ತೆಯಲ್ಲಿ ಬರುವ ಈ ಸ್ತ್ರೀಯರು ಒಂದು ಅದ್ಭುತವಾದ ಪಟ್ಟಿಯನ್ನೇ ಮಾಡುತ್ತಾರೆ. ಮೊದಲನೆಯದಾಗಿ **ಮಗ್ದಲದ ಮರಿಯಳೂ** ಅವಳು ಮಗ್ದಲದವಳು ಎಂಬುದನ್ನು ಅವಳ ಹೆಸರು ಸೂಚಿಸುತ್ತದೆ (ನೋಡಿರಿ ವ್ಯಾಖ್ಯಾನ 15:39). ಲೂಕ 8:2ರ ಪ್ರಕಾರ, ಯೇಸು ಅವಳಿಂದ ಏಳು ದೆವ್ವಗಳನ್ನು ಬಿಡಿಸಿದ್ದನು. ಅವಳ ಸಮರ್ಪಣೆ ಆತನು ಜೀವಿತದಲ್ಲಿ ಏನು ಮಾಡಿದ್ದಾನೋ ಅದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುವ ವಿಧವಾಗಿ ತ್ತು (ನೋಡಿರಿ ವ್ಯಾಖ್ಯಾನ 27:61; 28:1).

ಇನ್ನೊಬ್ಬ **ಮರಿಯಳನ್ನು** ಸಹ ಉಲ್ಲೇಖಿಸಲಾಗಿದೆ; ಅವಳು ಯಾಕೋಬ ಮತ್ತು ಯೇಸೇಫನ ತಾಯಿಯಾಗಿದ್ದಳು. ಮಾರ್ಕ 15:40ರಲ್ಲಿ ಅವಳು **ಯಾಕೋಬ ಯೋಸೆಯರ ತಾಯಿಯಾಗಿದ್ದಳು.** ಅವಳು ಯೋಹಾನ 19:25ರಲ್ಲಿ ಉಲ್ಲೇಖಿಸಿದ ಕ್ಲೋಪನ ಹೆಂಡತಿಯಾಗಿರಬಹುದು.

ಮುಂದಿನ ಸ್ತ್ರೀ **ಜೆಬೆದಾಯನ ಮಕ್ಕಳ ತಾಯಿ** ಎಂದು ಹೆಸರಿಸಲಾಗಿದೆ. ಅದು ಯಾಕೋಬ ಮತ್ತು ಯೋಹಾನ (ನೋಡಿರಿ ವ್ಯಾಖ್ಯಾನ 4:21, 22). ಮಾರ್ಕನ ಸುವಾರ್ತೆಯಲ್ಲಿ ಅವಳನ್ನು ಸಲೋಮಿ ಎಂದು ಗುರುತಿಸಲಾಗಿದೆ (ಮಾರ್ಕ 15:40; 16:1). ಅವಳು ತನ್ನ ಗಂಡುಮಕ್ಕಳ ಪರವಾಗಿ ಯೇಸುವನ್ನು ಸಂಧಿಸಿದ್ದಳು, ಆತನ ರಾಜ್ಯದಲ್ಲಿ ಅವರಿಗೆ ಗೌರವದ ಸ್ಥಾನವನ್ನು ಪಡೆದುಕೊಳ್ಳುವದಕ್ಕಾಗಿದ್ದಳು (20:20-23).

ಲೂಕ 23:49ರ ಪ್ರಕಾರ, ಇತರ “ಸಾಕ್ಷಿಗಳು ಈ ಎಲ್ಲಾ ಸಂಗತಿಗಳನ್ನು ನೋಡುತ್ತಾ ದೂರದಲ್ಲಿ ನಿಂತುಕೊಂಡಿದ್ದರು.” ಯೋಹಾನ 19:26, 27 ಇದು ಯೇಸುವಿನ ತಾಯಿ ಮರಿಯಳು, “ಹತ್ತಿರದಲ್ಲಿ ನಿಂತಿದ್ದಳು” ಪ್ರೀತಿಯ ಶಿಷ್ಯನಾದ ಯೋಹಾನನೊಂದಿಗೆ ಎಂದು ತಿಳಿಸುತ್ತದೆ.

ಯೇಸುವಿನ ಹಿಂಬಾಲಕರು ಅಪನಂಬಿಕೆ ಮತ್ತು ಗಾಬರಿಯೊಂದಿಗೆ ನಿಂತಿದ್ದರು ಯಾಕೆಂದರೆ ಅವರು ಯೇಸು ಸಾಯುತ್ತಾನೆಂದು ನಿರೀಕ್ಷಿಸಿರಲಿಲ್ಲ - ವಿಶೇಷವಾಗಿ ಈ ರೀತಿಯಾಗಿ ಅಂತು ಅಲ್ಲ. ಅವನ ಮರಣದ ಕುರಿತು ಏನೂ ಸಂದೇಹವಿಲ್ಲದೇ ಹೋದಾಗ, ಅವರಲ್ಲಿ ಕೆಲವು ಸ್ತ್ರೀಯರನ್ನು ಬದಿಗೆ ಸರಿದರು ನಿಂತರು (27:61; ಲೂಕ 23:55), ಕೆಲವರು ನಿರಾಶರಾಗಿ ಮತ್ತು ಮನಸ್ಸಿನಲ್ಲಿ ಬೇಸರಗೊಂಡವರಾಗಿ ನಿರೀಕ್ಷೆ ಆತನೊಂದಿಗೆ ಸತ್ತುಹೋಯಿತು ಎಂದು ಯೋಚಿಸುತ್ತಾ ಅಲ್ಲಿಂದ ಹೊರಟುಹೋದರು.

## ಪಾಠಗಳು

## ಯೇಸು ಕ್ರೂಜೆಯನ್ನು ಸಂತೋಷದಿಂದ ಎದುರಿಸಿದನು (27:33-50)

ನಾವು ಕ್ರೂಜೆಯ ಕುರಿತಾಗಿ ಹೆಚ್ಚು ಕಲಿಯುತ್ತಿರುವ ಹಾಗೆ, ಆತನು ನಮಗಾಗಿ ಮಾಡಿದ ಬಲಿದಾನಕ್ಕಾಗಿ ನಾವು ನಮ್ಮ ರಕ್ಷಕನನ್ನು ಹೆಚ್ಚು ಪ್ರೀತಿಸುವದಕ್ಕೂ ಮತ್ತು ಆರಾಧಿಸುವದಕ್ಕೂ ಕಲಿಯುತ್ತೇವೆ. ನಾವು ಕ್ರೂಜೆಯನ್ನು ಅಧ್ಯಯನ ಮಾಡುತ್ತಿರುವ ಹಾಗೆ, ನಾವು ಕ್ರೂಜೆ ಒಂದು ತಪ್ಪು ಅಥವಾ ಪ್ರಾಚೀನವಾದದ್ದಲ್ಲ ಎಂಬ ಆಳವಾದ ಗ್ರಹಿಕೆಗೆ ಬರಬೇಕು. ಕ್ರೂಜೆ ದೇವರ ನಿತ್ಯವಾದ ಯೋಜನೆಯ ಭಾಗವಾಗಿದೆ. ಕ್ರೂಜೆಯು ದೇವರ ಹೃದಯದಲ್ಲಿ ಯೆರೂಸಲೇಮಿನ

ಬೆಟ್ಟದಲ್ಲಿ ಒಂದನ್ನು ನೆಡುವದಕ್ಕಿಂತ ಪೂರ್ವದಲ್ಲಿಯೇ ಇತ್ತು (ನೋಡಿರಿ ಎಫೆಸ 1:3, 4; 2 ತಿಮೊಥೆ 1:9; 1 ಪೇತ್ರ 1:19, 20).

ದೇವರು ಪರಿಪೂರ್ಣವಾದ ನ್ಯಾಯವನ್ನು ಮತ್ತು ಅದೇ ಸಮಯದಲ್ಲಿ ನಮ್ಮ ಮೇಲೆ ಆತನಿಗಿರುವ ಪ್ರೀತಿಯನ್ನು ಪ್ರದರ್ಶಿಸುವದಕ್ಕೆ ಉತ್ತಮವಾದ ಮಾರ್ಗ ಯಾವುದು (ರೋಮಾಪುರ 3:24-26)? ಯೇಸು ತನ್ನ ತಂದೆಯ ಚಿತ್ತವನ್ನು ನೆರವೇರಿಸುವದಕ್ಕೆ ಬಂದದ್ದರಿಂದ ಆತನು ಕ್ರೂಜೆಯನ್ನು ಅವಶ್ಯಕತೆ ಎಂದು ದೃಷ್ಟಿಸಿದನು (16:21-23). ಅವನು ಸ್ವ-ಇಚ್ಛೆಯಿಂದ ಕ್ರೂಜೆಯನ್ನು ಸ್ವೀಕರಿಸಿದನು ಯಾಕೆಂದರೆ ಆತನು ತನ್ನನ್ನು ದೇವರ ಸೇವಕನೆಂದು ನೋಡಿದನು.

## ಯೇಸುವನ್ನು ಕ್ರೂಜೆಯ ಮೇಲೆ ಹಿಡಿದಿಟ್ಟಿದ್ದು ಏನು? (27:40)

ರೋಮನ್ ಸೈನಿಕರು ಆತನನ್ನು ಶಿಲುಬೆಗೆ ಹಾಕಿದಾಗ ಆತನ ಕೈಗಳಿಗೆ ಮೊಳೆಗಳನ್ನು ಜಡಿದರು (ನೋಡಿರಿ ಯೋಹಾನ 20:25). ಆತನಿಗೆ, "ನೀನು ದೇವರ ಮಗನಾಗಿದ್ದರೆ, ಕ್ರೂಜೆಯಿಂದ ಇಳಿದು ಬಾ" (27:40) ಎಂದು ಇತರರು ಹೇಳಿದಾಗಲೂ ಅಲ್ಲಿ ಇರುವಂತೆ ಮಾಡಿದ ಸಂಗತಿ ಏನು? ಆತನನ್ನು ಅಲ್ಲಿ ಹಿಡಿದಿಟ್ಟದ್ದು ಮೊಳೆಗಳಲ್ಲ (26:53; ಯೋಹಾನ 10:17, 18), ಅದು ತಂದೆಯ ಚಿತ್ತ (26:39). ಯೇಸು ತನ್ನ ಮರಣದವರೆಗೆ ಶಿಲುಬೆಯ ಮೇಲೆ ಇದ್ದನು ಯಾಕೆಂದರೆ ಆತನು ಹೀಗೆ ಮಾಡುವದು ದೇವರ ನಿತ್ಯತ್ವದ ಉದ್ದೇಶವಾಗಿತ್ತು (ಫಿಲಿಪ್ಪಿ 2:5-11). "ತನ್ನ ಮುಂದಿಟ್ಟಿರುವ ಸಂತೋಷಕ್ಕಾಗಿ" ಆತನು ಶಿಲುಬೆಯನ್ನು ಸಹಿಸಿಕೊಂಡನು (ಇಬ್ರಿಯ 12:2). ನಮ್ಮ ಪರವಾಗಿ ಆತನು ತೋರಿಸಿದ ಶ್ರೇಷ್ಟವಾದ ಪ್ರೀತಿಯ ಪ್ರತಿಯಾಗಿ, ದೇವರ ಮೇಲೆ ಮತ್ತು ಕ್ರಿಸ್ತನ ಮೇಲೆ ನಮಗಿರುವ ಪ್ರೀತಿ ಸೈತಾನನು ಯಾವುದೇ ಅಡೆತಡೆಗಳನ್ನು ನಮ್ಮ ಮಾರ್ಗದಲ್ಲಿ ಹಾಕಲಿ, ದೇವರ ರಾಜ್ಯದಲ್ಲಿ ನಂಬಿಗಸ್ತರಾಗಿರುವಂತೆ ನಮ್ಮನ್ನು ಪ್ರೇರೇಪಿಸುತ್ತದೆ.

## ಕ್ರೂಜೆಯ ಮೇಲೆ ಯೇಸು ನುಡಿದ ಏಳು ಮಾತುಗಳು (27:46)

ಮತ್ತಾಯನು ಕ್ರೂಜೆಯ ಸಮಯದಲ್ಲಿ ಯೇಸು ನುಡಿದ ಒಂದು ಮಾತನ್ನು ಮಾತ್ರ ದಾಖಲಿಸಿದ್ದಾನೆ. ಆದಾಗ್ಯೂ, ಎಲ್ಲಾ ಸುವಾರ್ತೆಗಳನ್ನು ಪರೀಕ್ಷಿಸಿದಾಗ, ನಾವು ಏಳು ಮಾತುಗಳನ್ನು ಕಂಡುಕೊಳ್ಳುತ್ತೇವೆ:

1. "ತಂದೆಯೇ, ಅವರನ್ನು ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" (ಲೂಕ 23:34).
2. "ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ" (ಲೂಕ 23:43).
3. "ಇಗೋ, ನಿನ್ನ ಮಗನು ... ಇಗೋ, ನಿನ್ನ ತಾಯಿ!" (ಯೋಹಾನ 19:26, 27).
4. "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟಿದ್ದೀ?" (ಮತ್ತಾಯ 27:46; ಮಾರ್ಕ 15:34).
5. "ನನಗೆ ಬಾಯಾರಿಕೆಯಾಗಿದೆ!" (ಯೋಹಾನ 19:28).
6. "ತೀರಿತು!" (ಯೋಹಾನ 19:30).
7. "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ" (ಲೂಕ 23:46).

David Stewart

## “ಪರದೈಸಿ” ಎಂದರೇನು? (27:50)

ಯೇಸುವಿನ ಆತ್ಮವು ಶುಕ್ರವಾರ ರಾತ್ರಿಯಿಂದ ಭಾನುವಾರ ಮುಂಜಾನೆಯವರೆಗೆ ಎಲ್ಲಿಯೋ ಇತ್ತು. ಎಲ್ಲಿ? ಆತನು ತನ್ನ ಆತ್ಮವನ್ನು ತನ್ನ ತಂದೆಯ ಕೈಗೆ ಒಪ್ಪಿಸಿದಾಗ್ಯೂ (ಲೂಕ 23:46). ಅವನು ಆ ಸಮಯದಲ್ಲಿ ಪರಲೋಕಕ್ಕೆ ಹಿಂತಿರುಗಿರಲಿಲ್ಲ (ಯೋಹಾನ 20:17). “ಪರದೈಸು” ಎಂದು ಅನುವಾದಿಸಿದ ಗ್ರೀಕ್ ಪದದ ಅರ್ಥ “ಸುಂದರ ತೋಟ ಅಥವಾ ಉಪವನ” (ಲೂಕ 23:43). ಅಂದರೆ ಪರದೈಸು ಎಲ್ಲಿದೆ? ಯೇಸು ಖಂಡಿತವಾಗಿ ಸಮಾಧಿಯ ಕುರಿತಾಗಿ ಮಾತನಾಡುತ್ತಿಲ್ಲ; ಕತ್ತಲು ತುಂಬಿರುವ ಸಮಾಧಿ ಪರದೈಸಲ್ಲ.

ಹೊಸ ಒಡಂಬಡಿಕೆ ಜನರ ಆತ್ಮದ ಮಾಂಸಾಧಿರಿ ಜೀವಿತ ಮತ್ತು ನಿತ್ಯತ್ವದ ಸ್ಥಳ ಎರಡರ ಮಧ್ಯದ ಸ್ಥಿತಿಯನ್ನು ಪ್ರಕಟಿಸುತ್ತದೆ. ಈ ಸ್ಥಳದ ಹೆಸರು “Hades” ಇದು ಕಣ್ಣಿಗೆ ಕಾಣದಿರುವ ಸತ್ತವರು ಶರೀರವನ್ನು ತ್ಯಜಿಸಿ ಆತ್ಮಸ್ವರೂಪಿಗಳಾಗಿ ಇರುವ ಸ್ಥಳವಾಗಿದೆ. ಆತ್ಮಗಳಿಗೆ ತಾತ್ಕಲಿಕವಾದ ಸ್ಥಳವಾಗಿದೆ ಯೇಸು ಇದರ ಕುರಿತಾಗಿ ಶ್ರೀಮಂತ ಮನುಷ್ಯ ಮತ್ತು ಬಡ ಲಾಜರನ ಕಥೆಯನ್ನು ವರ್ಣಿಸಿದ್ದಾನೆ (ಲೂಕ 16:19-31).

ನೀತಿವಂತರು ಮತ್ತು ಅನೀತಿವಂತರು “Hades”ಗೆ ಹೋಗುತ್ತಾರೆ, ಆದರೆ ಒಂದು ಸ್ಥಳಕ್ಕೆ ಅಲ್ಲ. ಯೇಸುವಿನ ಸಾಮ್ಯದಲ್ಲಿ ಭಿಕ್ಷುಕನಾದ ಲಾಜರನು ಅಬ್ರಹಾಮನ ಎದೆಗೆ ಒರಗಿಕೊಂಡು ನೆಮ್ಮದಿಯಿಂದ ಇದ್ದನು, ಅದೇ ಸಮಯದಲ್ಲಿ ಶ್ರೀಮಂತ ಮನುಷ್ಯನು “ಹಿಂಸೆಯನ್ನು” ಅನುಭವಿಸುತ್ತಿದ್ದನು (ಲೂಕ 16:22, 23). ಇಬ್ಬರನ್ನು ಒಂದು ಕಂದಕ ಪ್ರತ್ಯೇಕಿಸುತಿತ್ತು (ಲೂಕ 16:26). ಯೇಸು ಮರಣಹೊಂದಿದಾಗ, ಆತನು ಪರದೈಸಿಗೆ ಹೋದನು (ಲೂಕ 23:43). “Hades” ಅಲ್ಲಿ ಎರಡು ವಿಭಾಗಗಳಿದ್ದವು, ಒಂದು ಹಿಂಸೆಗಾಗಿ ಮತ್ತು ಇನ್ನೊಂದು ನೆಮ್ಮದಿ ನೀಡುವದಕ್ಕಾಗಿ. ಒಂಜು ದಿವಸ ಪುನರುತ್ಥಾನದಲ್ಲಿ “Hades” ಸತ್ತವರನ್ನು ಬಿಟ್ಟುಕೊಡುತ್ತದೆ (ಪ್ರಕಟಣೆ 20:13). ಯಾತನೆಯ ಸ್ಥಳದಲ್ಲಿರುವವರು ನರಕಕ್ಕೆ ಹಾಕಲ್ಪಡುವರು, ಅದೇ ಸಮಯದಲ್ಲಿ ಯಾರು ಪರದೈಸಿನಲ್ಲಿರುವರೋ ಅವರು ಪರಲೋಕಕ್ಕೆ ಹೋಗುವರು.

---

ಟಿಪ್ಪಣಿಗಳು

[1]ನೇರವಾಗಿ ಇರುವ ಕಟ್ಟಿಗೆ ತುಂಡನ್ನು ಕೆಲವು ಸಾರಿ ಕ್ರೂಜೆಯ ಸ್ಥಳದಲ್ಲಿ ನೆಲದ ಒಳಗಡೆ ಬಿಡುತ್ತಿದ್ದರು. ಆ ಸ್ಥಳಕ್ಕೆ ಮುಟ್ಟಿದ ಮೇಲೆ ಖಂಡನೆಗೆ ಒಳಗಾದ ವ್ಯಕ್ತಿಯ ಕೈಗಳನ್ನು ಅಡ್ಡವಾಗಿರುವ ತುಂಟಿಗೆ ಮೊಳೆಗಳಿಂದ ಹೊಡೆಯುತ್ತಿದ್ದರು ಅಥವಾ ಕಟ್ಟುತ್ತಿದ್ದರು. ಅದನ್ನು ನೇರವಾಗಿ ನಿಂತಿರುವ ತುಂಡಿಗೆ ಜೋಡಿಸಿ ಮೇಲೆತ್ತುತ್ತಿದ್ದರು. ತರುವಾಯ ವ್ಯಕ್ತಿಯ ಕಾಲುಗಳನ್ನು ನೇರವಾಗಿ ನಿಂತಿರುವ ತುಂಡಿಗೆ ಬಿಗಿಯಾಗಿ ಕೂಡಿಸುತ್ತಿದ್ದರು (ಮೊಳೆಗಳಿಂದ ಹೊಡೆಯುತ್ತಿದ್ದರು). [2]Plutarch *Moralia* 554B. [3]Josephus *Against Apion* 2.4. [4]Michael J. Wilkins, “Matthew,” in *Zondervan Illustrated Bible Backgrounds Commentary, vol. 1, Matthew, Mark, Luke,* ed. Clinton E. Arnold (Grand Rapids, Mich.: Zondervan, 2002), 178; David F. Payne, “Golgotha,” in *The International Standard Bible Encyclopedia,* rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:523–24. [5]Talmud *Sanhedrin* 43a; see Prov. 31:6. [6]Jack P. Lewis, *The Gospel According to Matthew,* Part 2, The Living Word Commentary (Austin, Tex.: Sweet Publishing Co., 1976), 162; Metzger, 57–58, 153. [7]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 717. [8]G. Bertram, *“paízō,”* in *Theological Dictionary of the New Testament,* ed. Gerhard Kittel and Gerhard Friedrich, abr. and trans. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 758. [9]ಹಿಂದಿನ ವಚನವು ಕೀರ್ತನೆ 22ರಲ್ಲಿ

ತಲೆ ಆಡಿಸುತ್ತಾ ಎಂದು ಸೂಚಿಸಲಾಗಿದೆ (ನೋಡಿರಿ ವ್ಯಾಖ್ಯಾನ 27:39). [10]ನೋಡಿರಿ Wisdom of Solomon 2:17–20.

[11]ನಾಲ್ಕನೆ ಗುಂಪು ಲೂಕನು ತಿಳಿಸಿದ್ದಾನೆ, ಅದು ಸೈನಿಕರಿಂದ ಒಳಗೊಂಡಿತು (ಲೂಕ 23:36, 37). [12]ಸುವಾರ್ತೆ ವಿಶೇಷತೆ ಎತ್ತಿ ತೋರಿಸಿದಾಗ, ಕ್ರಿಸ್ತನ ಕ್ರೂಜೆಯ ಸಮಯದಲ್ಲಿ ಆಗಿರುವ ಕತ್ತಲು ಇತಿಹಾಸದಲ್ಲಿ ಅದರ ಮೂಲವನ್ನು ಗುರುತಿಸಿರುವಂಥದ್ದಾಗಿದೆ. (*Origen Against Celsus* 2.33.) ಸಂಪ್ರದಾಯವು ಸಹ ಅದನ್ನು ಪೊಂತ ಪಿಲಾತನು ಬರೆದನೆಂದು ಸುಳ್ಳು ಪತ್ರವು ಆರೋಪಿ ಸುತ್ತದೆ. (*Letter of Pilate to Tiberius*.) [13]Tertullian *Apology* 1.21. [14]John MacArthur, Jr., *The MacArthur New Testament Commentary: Matthew 24—28* (Chicago: Moody Press, 1989), 270. [15]J. W. McGarvey, *The New Testament Commentary*, vol. 1*, Matthew and Mark* (N.p., 1875; reprint, Delight, Ark.: Gospel Light Publishing Co., n.d.), 246. [16]Mishnah *Shekalim* 8.5. [17]Josephus *Wars* 5.5.4. [18]F. F. Bruce, *The Epistle to the Hebrews*, New International Commentary on the New Testament (Grand Rapids, Mich.: Wm. B. Eerdmans Publishing Co., 1964), 246.